# ಜಿಲ್ಲೆಯಹೆಸರು: ಬೆಂಗಳೂರುಗ್ರಾಮಾಂತರ
# ಜಿಲ್ಲಾಉಸ್ತುವಾರಿಕಾರ್ಯದರ್ಶಿ: ಶ್ರೀಮತಿ ಪಿ. ಹೇಮಲತ

ದಿನಾಂಕ 30.09.2020ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಭೇಟಿ ನೀಡಿ ಕೋವಿಡ್-19(ಕರೋನ ವೈರಸ್‌ನ) ನಿಯಂತ್ರಣಕ್ಕಾಗಿ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಕುರಿತು ಸಭೆ ನಡೆಸಲಾಗಿರುತ್ತದೆ:-

1. ಜಿಲ್ಲೆಯಲ್ಲಿ ಪತ್ತೆಯಾದ ಕೋವಿಡ್-19 ಪ್ರಕರಣಗಳ ಘೋಷ್ವಾರೆ

| ಕ್ರ.ಸಂ | ತಾಲ್ಲೂಕಿನ ಹೆಸರು | ಪತ್ತೆಯಾದ ಒಟ್ಟು ಪ್ರಕರಣಗಳು | ಆಸ್ಪತ್ರೆಯಿಂದ Discharge ಆದ ಪ್ರಕರಣಗಳು | ಸಕ್ರಿಯ ಪ್ರಕರಣಗಳು | ಮರಣ ಹೊಂದಿರುವ ಪ್ರಕರಣಗಳು |
|---|---|---|---|---|---|
| 1 | ದೇವನಹಳ್ಳಿ | 2343 | 2196 | 136 | 11 |
| 2 | ದೊಡ್ಡಬಳ್ಳಾಪುರ | 3566 | 2546 | 965 | 55 |
| 3 | ಹೊಸಕೋಟೆ | 2890 | 2568 | 304 | 18 |
| 4 | ನೆಲಮಂಗಲ | 3199 | 2573 | 608 | 18 |
| 5 | ಹೊರ ರಾಜ್ಯ ಮತ್ತು ಜಿಲ್ಲೆಯ ಪ್ರಕರಣಗಳು | 809 | 695 | 107 | 7 |
| | ಒಟ್ಟು | 12807 | 10578 | 2120 | 109 |

2. ಜಿಲ್ಲೆಯಲ್ಲಿನ ಕಂಟೈನ್‌ಮೆಂಟ್ ವಲಯಗಳ ಘೋಷ್ವಾರೆ

| ಕ್ರ.ಸಂ | ತಾಲ್ಲೂಕಿನ ಹೆಸರು | ಒಟ್ಟು ಕಂಟೈನ್‌ಮೆಂಟ್ ವಲಯಗಳ ಸಂಖ್ಯೆ | ಘೋಷಿತ ಕಂಟೈನ್‌ಮೆಂಟ್ ವಲಯಗಳ ಸಂಖ್ಯೆ | ಚಾಲ್ತಿಯಲ್ಲಿರುವ ಕಂಟೈನ್‌ಮೆಂಟ್ ವಲಯಗಳ ಸಂಖ್ಯೆ |
|---|---|---|---|---|
| 1 | ದೇವನಹಳ್ಳಿ | 132 | 22 | 110 |
| 2 | ದೊಡ್ಡಬಳ್ಳಾಪುರ | 163 | 07 | 156 |
| 3 | ಹೊಸಕೋಟೆ | 166 | 25 | 411 |
| 4 | ನೆಲಮಂಗಲ | 167 | 18 | 149 |
| | ಒಟ್ಟು | 628 | 72 | 556 |

### 3. ಕೋವಿಡ್–19 ದೃಡಪಟ್ಟು ಹೋಂ ಐಸೋಲೇಷನ್‌ನಲ್ಲಿರುವ ಪ್ರಕರಣಗಳ ಘೋಷ್ವಾರೆ

| ಕ್ರಸಂ | ತಾಲ್ಲೂಕಿನ ಹೆಸರು | Home Isolation ನಲ್ಲಿರುವ ಒಟ್ಟು ಪ್ರಕರಣಗಳು |
|---|---|---|
| 1 | ದೇವನಹಳ್ಳಿ | 165 |
| 2 | ದೊಡ್ಡಬಳ್ಳಾಪುರ | 822 |
| 3 | ಹೊಸಕೋಟೆ | 330 |
| 4 | ನೆಲಮಂಗಲ | 273 |
| | ಒಟ್ಟು | 1590 |

### 4. ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರ ವಿವರ

| ಪ್ರಾಥಮಿಕ ಸಂಪರ್ಕಿತರು | ದ್ವಿತೀಯ ಸಂಪರ್ಕಿತರು |
|---|---|
| 18152 | 18727 |

### 5. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ SARI and ILI ಪ್ರಕರಣಗಳಿಗೆ ಸಂಬಂದಿಸಿದಂತೆ ವಿವರ

ದಿನಾಂಕ:26.08.2020ರ ಅಂತ್ಯಕ್ಕೆ ಒಟ್ಟು 16638ILI Case ಮತ್ತು 487 SARI ಪ್ರಕರಣಗಳು ಮತ್ತು 296 ಕೋವಿಟ್–19 ಪ್ರಕರಣಗಳು ಪತ್ತೆಯಾಗಿದ್ದು, ಸೋಂಕಿತರುಗಳನ್ನು ಪತ್ತೆಹಚ್ಚಲಾದ ಆಸ್ಪತ್ರೆಗಳಿಗೆ ರವಾನಿಸಲಾಗಿರುತ್ತದೆ.

**6. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 56 ಆರೋಗ್ಯ ಸಮುದಾಯ ಕೇಂದ್ರಗಳು ಮತ್ತು 5 ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಒಟ್ಟು 61 fever clinics ಗಳನ್ನು ಸ್ಥಾಪಿಸಲಾಗಿದೆ.**

7. ಗಂಟಲು ದ್ರವ ಪರೀಕ್ಷಾ ಕೇಂದ್ರಗಳ ವಿವರ:

| ಒಟ್ಟು ಗಂಟಲು ದ್ರವ ಪರೀಕ್ಷಾ ಕೇಂದ್ರಗಳ ಸಂಖ್ಯೆ | ಪರೀಕ್ಷೆಗೊಳ ಪಡಿಸಿದ ಗಂಟಲು ದ್ರವಗಳ ಸಂಖ್ಯೆ | ಗಂಟಲು ದ್ರವ ಪರೀಕ್ಷಾ ವರದಿ ನಿರೀಕ್ಷಣೆಯಲ್ಲಿರುವವರ ಸಂಖ್ಯೆ | ಸರಬರಾಜು ಮಾಡಲಾದ ಸಂಖ್ಯೆRapid Antigen Test(RAT)ಕಿಟ್‌ಗಳ | Rapid Antigen Test(RAT)ಗೆ ಒಳಪಡಿಸಿರುವ ಪ್ರಕರಣಗಳ ವಿವರ-2092 | |
|---|---|---|---|---|---|
| | | | | Number Of Positive Cases | Number Of Negative Cases |
| 16 | 37664 | 2651 | 37150 | 4854 | 26835 |

8. ತಾಲ್ಲೂಕುವಾರು ಗಂಟಲು ದ್ರವ ಪರೀಕ್ಷಾ ಕೇಂದ್ರಗಳ ವಿವರ:

- ನೆಲಮಂಗಲ – 02
- ದೊಡ್ಡಬಳ್ಳಾಪುರ – 03
- ದೇವನಹಳ್ಳಿ – 05
- ಹೊಸಕೋಟೆ – 06

9. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 83 ಟಿಎನ್‌ಆರ್ 2020, ದಿನಾಂಕ:04.04.2020 ರಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೋವಿಡ್ ಕೆಲಸ-ಕಾರ್ಯಗಳ ನಿರ್ವಹಣೆಗಾಗಿ 18 ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ

10. **Home Quarantined Persons Details (Taluk wise)**

| Sl.No | Home Quarantined Taluk wise | Total No of Person | No. Of persons who finished 14 days Quarantined period | No. of persons presently under observation |
|---|---|---|---|---|
| 1 | Hosakote | 6884 | 2389 | 4495 |
| 2 | Devanahalli | 6620 | 2508 | 4112 |
| 3 | Doddaballapura | 7178 | 2568 | 4610 |
| 4 | Nelamangala | 7292 | 2679 | 4613 |
| **TOTAL** | | **27974** | **10144** | **17830** |

| | | DCHC COVID-19 CENTRES | | | | |
|---|---|---|---|---|---|---|
| SL.NO | Facility Name | Beds Sanctioned | Currently number of beds occupied | Number of beds vacant | ICU Beds Sanctioned | Number of Ventilators available |
| 1 | Silicon City HopsitalHoskote | 15 | 12 | 1 | 2 | 2 |
| 2 | Colombia Asia clinic | 9 | 9 | 9 | 2 | 2 |
| 3 | Manasa Hospital Devanahalli | 30 | 7 | 23 | 2 | 1 |
| 4 | Nandi Hospital | 15 | 0 | 15 | 2 | 0 |
| 5 | V P MAGNUS HOSPITA L Nelamangala | 20 | 18 | 2 | 0 | 0 |
| 6 | SIDDHARTHA MEDICAL COLLEGE & HOSPITA L | 150 | 85 | 65 | 0 | 0 |
| 7 | GHHoskote | 27 | 21 | 6 | 0 | 1 |
| 8 | GH Nelamangala | 30 | 11 | 19 | 0 | 0 |
| 9 | RAMAIAH HARSHA HOPSITA L Nelamangala | 40 | 31 | 9 | 0 | 0 |
| 10 | RamaiahLeena Hospital DVH | 20 | 15 | 5 | 0 | 0 |
| 11 | Marthoma Mission Hospital | 30 | 2 | 28 | 0 | 0 |
| 12 | SHREE RAVI SOMESH EKAR HOSPITA L | 15 | 0 | 15 | 2 | 1 |
| 13 | Manasa Hospital, Doddaballapura | 15 | 1 | 14 | 2 | 1 |
| 14 | MCH, Devanahal li (DCH) | 60 | 35 | 25 | 10 | 8 |
| 15 | GH, Doddaballapura | 56 | 50 | 6 | 3 | 4 |
| 16 | Akash Hospital, Devanahalli | 660 | 543 | 117 | 25 | 20 |
| 17 | MVJ, Medical College & Hospital | 413 | 159 | 254 | 7 | 3 |
| 18 | JK Speciality Hospital | 6 | 0 | 6 | 0 | 0 |
| | TOTAL | 1611 | 999 | 619 | 57 | 43 |

| | | COVID CARE CENTRES (CCC) - 29 | | | |
|---|---|---|---|---|---|
| SL.NO | TALUK | NAME OF THE CCC | BEDS SANTIONED | Beds Occupied | Beds vacant |
| 1 | Devanahalli | MDRS Kundana | 100 | 0 | 100 |
| 2 | Devanahalli | AtalBihari Vajpayee Residential school Bommavara | 100 | 0 | 100 |
| 3 | Devanahalli | Post Metric Boys Hostel Vijayapura | 24 | 12 | 12 |
| 4 | Doddaballapura | MDRS, Bacchahalli | 66 | 22 | 44 |
| 5 | Devanahalli | Pre metric Boys hostel Budigere | 25 | 17 | 8 |
| 6 | Nelamangala | Sri Siddhartha Institute of Medical Sciences T Begur | 30 | 0 | 30 |
| 7 | Nelamangala | Yatrik Comforts Nelamangala | 10 | 0 | 10 |
| 8 | Nelamangala | Shrinidhi lodge Nelamangala | 50 | 0 | 50 |
| 9 | Nelamangala | Government boys SW hostel Nelamangala town | 60 | 0 | 60 |
| 10 | Nelamangala | Government SW general boys hostel Narasipura | 60 | 0 | 60 |
| 11 | Nelamangala | Government SW general boys hostel Byranayakanahalli | 25 | 0 | 25 |
| 12 | Devanahalli | Government Boys Hostel Devanahalli(SW | 200 | 0 | 200 |
| 13 | Devanahalli | Post metric BCM Engineering and Medical boys hostel | 50 | 0 | 50 |
| 14 | Doddaballapura | Dr B R Ambedkar Residential School Isthur | 40 | 25 | 15 |
| 15 | Doddaballapura | Premetric SW Boys hostel Hanabe | 20 | 0 | 20 |
| 16 | Doddaballapura | Premetric SW girls hostel Doddaballapura | 25 | 0 | 25 |
| 17 | Doddaballapura | Premetric SW boys hostel Doddaballapura town | 30 | 15 | 15 |
| 18 | Doddaballapura | Annie Besant park Scout camp Doddaballapura | 80 | 0 | 80 |
| 19 | Doddaballapura | Premetric boys hostel sakkaregollahall i | 20 | 0 | 20 |
| 20 | Doddaballapura | BCM post metric boys hostel Madagondanahalli | 25 | 0 | 25 |
| 21 | Doddaballapura | Government post metric boys hostel Bhuvaneswarinagar | 25 | 7 | 18 |
| 22 | Hoskote | MDRS, Jadigenahalli | 80 | 18 | 62 |
| 23 | Hoskote | MDRS Sulibele | 50 | 0 | 50 |
| 24 | Hoskote | Premetric BCM boys hostel Nandagudi | 15 | 1 | 14 |

| | | | | | |
|---|---|---|---|---|---|
| 25 | Hoskote | Premetric General SW boys hostel Thavarekere | 22 | 22 | 0 |
| 26 | Hoskote | Government general SW boys hostel jadigenahalli | 20 | 0 | 20 |
| 27 | Hoskote | Al Ameen Residential School Hoskote | 70 | 30 | 40 |
| 28 | Hoskote | MDRS, Dandupalya | 40 | 0 | 40 |
| 29 | Hoskote | Premetric General SW boys hostel Sulibele | 25 | 0 | 25 |
| | | TOTAL | 1387 | 169 | 1218 |

12. **ಕೋವಿಡ್-19 ನಿರ್ವಹಣೆಗೆ ಸಂಬಂಧಿಸಿದಂತೆಯೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅಗತ್ಯ ಪರಿಕರಗಳನ್ನು ಒದಗಿಸುವ ಬಗ್ಗೆ.**

- ಕ್ವಾರಂಟೈನ್ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳಿಗೆ ಪಿಪಿಇ ಕಿಟ್, ಎನ್-95 ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್‌ಗಳನ್ನು ಒದಗಿಸಲಾಗಿರುತ್ತದೆ.
- ಮೇಲ್ವಿಚಾರಣಾ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ಫಿವರ್ ಕ್ಲಿನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಮತ್ತು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಿ.ಎಂ.ಟಿ.ಸಿ ಸಂಸ್ಥೆಯ ಚಾಲಕರು/ನಿರ್ವಾಹಕರುಗಳಿಗೆ ಎನ್-95 ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್‌ಗಳನ್ನು ಒದಗಿಸಲಾಗಿರುತ್ತದೆ.
- ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳಿಗೆ ಗೌನ್, ಸ್ಯಾನಿಟೈಸರ್, ಎನ್-95 ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್‌ಗಳನ್ನು ಒದಗಿಸಲಾಗಿರುತ್ತದೆ.
- ಕೋವಿಡ್-19 ಕೇರ್ ಸೆಂಟರ್ ಹಾಗೂ ಐಸೋಲೇಷನ್ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ **ಪೊಲೀಸ್** ಸಿಬ್ಬಂದಿಗೆ ಗೌನ್, ಸ್ಯಾನಿಟೈಸರ್, ಎನ್-95 ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್‌ಗಳನ್ನು ಒದಗಿಸಲಾಗಿರುತ್ತದೆ.

13. ಕೋವಿಡ್-19 ತುರ್ತು ಪರಿಸ್ಥಿತಿ ನಿರ್ವಹಣೆಗಾಗಿ ಎಸ್.ಡಿ.ಆರ್.ಎಫ್ ಅನುದಾನದಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ **ಒಟ್ಟು 13.71 ಕೋಟಿ** ಅನುದಾನ ಬಿಡುಗಡೆಯಾಗಿರುತ್ತದೆ.
14. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೋವಿಡ್-19 ತಡೆಗಟ್ಟುವ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಗಂಟಲು ಮಾದರಿಯನ್ನು ಸಂಗ್ರಹಿಸಲು ಹಾಗೂ ದೃಢಪಟ್ಟ ವ್ಯಕ್ತಿಗಳನ್ನು ಶೀಘ್ರವಾಗಿ ಆಸ್ಪತ್ರೆಗೆ ದಾಖಲಿಸಲು ಮತ್ತು ನಿರ್ಬಂಧಿತ ವಲಯಗಳ ಕಡೆ ಹೆಚ್ಚಿನ ಗಮನಹರಿಸಿ ವ್ಯಕ್ತಿಗಳ ಚಲನ-ವಲನಗಳ ಮೇಲೆ ಮತ್ತು ಗೃಹ ದಿಗ್ಬಂದನಲ್ಲಿರುವವರ ಮೇಲೆ ತೀವ್ರ ನಿಗಾವಹಿಸಲು ಸೂಚಿಸಲಾಗಿದೆ.

Hemalatha P

ಶ್ರೀಮತಿ ಪಿ. ಹೇಮಲತಾ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
ಹಾಗೂ ಉಸ್ತುವಾರಿ ಕಾರ್ಯದರ್ಶಿಗಳು
ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಅಭಿಯಾನ ನಿರ್ದೇಶಕರ ಕಚೇರಿ**
**ರಾಷ್ಟ್ರೀಯ ಜೀವನೋಪಾಯ ಅಭಿಯಾನ**

ಕರ್ನಾಟಕ ಸರ್ಕಾರ

**ಫೋನ್ ನಂ. 080-25599991/2/3**
**ಇ-ಮೇಲ್:daynulm@gmail.com**
**ನಂ.11, ಕೊಠಡಿ ನಂ: 305, 3ನೇ ಮಹಡಿ,**
**ಬ್ಲೂ ಕ್ರಾಸ್ ಛೇಂಬರ್ಸ್ ಕಟ್ಟಡ,**
**ಇನ್‌ಫ್ಯಾಂಟ್ರಿ ಅಡ್ಡರಸ್ತೆ, ಬೆಂಗಳೂರು-560 001.**

ನಂ. ಅನಿಕ 11 ಡೇ-ನಲ್ಮ್ 2020-21 ದಿನಾಂಕ: 08.10.2020

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಸುಧಾರಣೆ), ಬೆಂಗಳೂರು-560 001.

ಮಾನ್ಯರೇ,

ವಿಷಯ: ಗದಗ ಜಿಲ್ಲೆಯ ಭೇಟಿಯ ವರದಿಯನ್ನು ನಿಗದಿತ ನಮೂನೆಯಲ್ಲಿ ಒದಗಿಸುತ್ತಿರುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಇಸಪ 2019, ದಿನಾಂಕ:24.04.2020.

2) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಇಸಪ 2019, ದಿನಾಂಕ:22.04.2020.

---*/*/*---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರಿ ಆದೇಶದಂತೆ, ದಿನಾಂಕ:03 ಮತ್ತು 04, ಸೆಪ್ಟೆಂಬರ್ 2020 ರಂದು ಗದಗ ಜಿಲ್ಲೆಗೆ 6ನೇ ಭೇಟಿ ನೀಡಿ, ಕೈಗೊಂಡ ಪ್ರಗತಿ ಪರಿಶೀಲನಾ ಹಾಗೂ ಕ್ಷೇತ್ರ ಭೇಟಿ ವರದಿಯನ್ನು ಉಲ್ಲೇಖ(2)ರ ಸರ್ಕಾರದ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ.ಎಂ.ಟಿ.ರೇಜು, ಭಾ.ಆ.ಸೇ.)
ಅಭಿಯಾನ ನಿರ್ದೇಶಕರು,
ರಾಷ್ಟ್ರೀಯ ಜೀವನೋಪಾಯ ಅಭಿಯಾನ,
ಬೆಂಗಳೂರು ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಪ್ರತಿಯನ್ನು ಮಾಹಿತಿಗಾಗಿ:-

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ - ಗದಗ ಜಿಲ್ಲೆ ಭೇಟಿಯ ವರದಿಯನ್ನು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
2) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ - ಗದಗ ಜಿಲ್ಲೆ ಭೇಟಿಯ ವರದಿಯನ್ನು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
3) ಕಚೇರಿ ಪ್ರತಿ.

Scanned with CamScanner

# I. ಕೋವಿಡ್-19 ಪಾಸಿಟಿವ್ ವ್ಯಕ್ತಿಗಳ ಸಂಪರ್ಕ ಪತ್ತೆ

**1) 24 ಗಂಟೆಗಳ ಒಳಗೆ ಕೊವಿಡ್ ಪಾಸಿಟಿವ್ ವ್ಯಕ್ತಿಗಳ ಸಂಪರ್ಕಗಳನ್ನು ಪತ್ತೆ ಹಚ್ಚಲು ರಚಿಸಲಾದ ಸಂಪರ್ಕ(ಟ್ರೇಸಿಂಗ್) ತಂಡಗಳು ಸಾಕಷ್ಟು ಇವೆಯೇ?**

ಇವೆ. ಆದರೆ, ಕಳೆದ ಒಂಭತ್ತು ದಿನಗಳಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್.ಹೆಚ್.ಎಮ್) ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಲ್ಲಿ ಬಹುತೇಕ ಜನರು ಮುಷ್ಕರದಲ್ಲಿರುವುದರಿಂದ Swab Collection, sampling, reporting ಇತ್ಯಾದಿ ಕಾರ್ಯಗಳು ತುಂಬಾ ಕುಂಠಿತವಾಗಿರುತ್ತವೆ. ಇದು ಕೋವಿಡ್-19 ತಡೆಗಟ್ಟುವ ಕ್ರಮಗಳು ಹಾಗೂ ಆರೋಗ್ಯ ಇಲಾಖೆಯ ಇತರೆ ಚಟುವಟಿಕೆ ಮೇಲೆ ಋಣಾತ್ಮಕ ಪ್ರಭಾವ ಬೀರುತ್ತದೆ. ಮುಷ್ಕರವನ್ನು ಕೂಡಲೇ ಹಿಂಪಡೆಯುವಲ್ಲಿ ಕ್ರಮ ಕೈಗೊಳ್ಳದಿದ್ದರೆ, ರಾಜ್ಯ ಮಟ್ಟದಿಂದ ನಿಗದಿಪಡಿಸಿರುವ ಯಾವುದೇ ರೀತಿಯ ಕೋವಿಡ್ ಸೋಂಕು ಪರೀಕ್ಷೆಯ ಗುರಿಯನ್ನು ಜಿಲ್ಲೆಯಲ್ಲಿ ಪಾಲಿಸಲು ಕಷ್ಟಕರವಾಗುತ್ತದೆ.

**2) ಜಿಲ್ಲೆಯಲ್ಲಿ ಸಂಪರ್ಕ ಪತ್ತೆ ಹಚ್ಚುವಿಕೆಯನ್ನು ಸುಧಾರಿಸುವ ಕುರಿತು ಯಾವುದೇ ಸಲಹೆಗಳಿದ್ದಲ್ಲಿ, 50 ಪದಗಳಿಗೆ ಮಿರದಂತೆ ವರದಿ;**

ಗದಗ ಜಿಲ್ಲೆಗೆ ಹೊಸದಾಗಿ ಇನ್ನೊಂದು ಆರ್.ಟಿ.ಪಿ.ಸಿ.ಆರ್ ಯಂತ್ರ ಬಂದಿದ್ದರೂ ಸಹ, ಸ್ಯಾಂಪಲ್ ಸಂಗ್ರಹಣೆ ನಿಧಾನಗತಿಯಲ್ಲಿರುವುದರಿಂದ ಯಂತ್ರವನ್ನು ಪೂರ್ಣ ಪ್ರಮಾಣದಲ್ಲಿ ಬಳಸಲಾಗುತ್ತಿಲ್ಲ. ಇದಲ್ಲದೇ, ಆಗಾಗ ಆರ್.ಎ.ಟಿ ಕಿಟ್‌ಗಳು ಇಲ್ಲದಿರುವುದರಿಂದ ಟೆಸ್ಟಿಂಗ್ ಹಾಗೂ ಕ್ವಾರಂಟೈನ್ ಚಟುವಟಿಕೆಗಳು ಕುಂಠಿತವಾಗಿರುತ್ತದೆ. ಆದ್ದರಿಂದ ಪ್ರಸ್ತುತ ಹೂಡಲಾಗಿರುವ ಮುಷ್ಕರವನ್ನು ಹಿಂಪಡೆಯಲು ಅಗತ್ಯ ಕ್ರಮ ವಹಿಸುವುದು ಮತ್ತು ಕಿಟ್‌ಗಳು [RTPCR/RAT] ಜಿಲ್ಲೆಗಳಲ್ಲಿ ಯಾವಾಗಲೂ ಸಾಕಷ್ಟು ಸಂಖ್ಯೆಯಲ್ಲಿ ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲು Drugs and Logistics society ಗೆ ನಿರ್ದೇಶನ ನೀಡಬೇಕಾಗಿರುತ್ತದೆ.

ಇದಲ್ಲದೇ ಎಲ್ಲಾ ಆರೋಗ್ಯ ಕಾರ್ಯಕರ್ತರು ಹಾಗೂ ಸಿಬ್ಬಂದಿ ವರ್ಗದವರು ಸಂಪರ್ಕ ಪತ್ತೆ ಹಚ್ಚುವಿಕೆ ಹಾಗೂ ಕೋವಿಡ್ ಸಂಬಂಧ ವಿವಿಧ ಕಾರ್ಯದಲ್ಲಿ **ತೊಡಗಿರುವುದರಿಂದ, ಈ ಋತುಮಾನದಲ್ಲಿ** ಮಾಡಬೇಕಾಗಿರುವ ಆರೋಗ್ಯ ಸಂಬಂಧ ಇನ್ನಿತರೆ **ಎಲ್ಲಾ ಸೇವೆಗಳಿಗೆ ಅಡಚಣೆಯುಂ**ಟಾಗುತ್ತಿದೆ.



Scanned with CamScanner

3) **ಪ್ರತಿ ಕೋವಿಡ್ ಸಕಾರಾತ್ಮಕ ಪ್ರಕರಣದ ಪ್ರಾಥಮಿಕ, ದ್ವಿತೀಯ ಸಂಪರ್ಕಗಳ ಸಂಖ್ಯೆ:**

ಜಿಲ್ಲೆಯಲ್ಲಿ ಈವರೆಗೆ 9339 ಕೋವಿಡ್ ಸೋಂಕಿತರು ಪತ್ತೆಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆ ಹಚ್ಚಿ ಕ್ರಮ ಕೈಗೊಂಡಿದ್ದು, ವಿವರ ಈ ಕೆಳಗಿನಂತಿದೆ:

| ಒಟ್ಟು ಪ್ರಕರಣಗಳ ಸಂಖ್ಯೆ | **ಪ್ರಾಥಮಿಕ ಸಂಪರ್ಕ** | **ದ್ವಿತೀಯ ಸಂಪರ್ಕ** |
|---|---|---|
| 9339 | 35710 | 26912 |

4) **ಜಿಲ್ಲಾಡಳಿತವು ಯಾವುದೇ ಸಂಪರ್ಕಗಳನ್ನು ಬಿಡದೇ ಸಮಗ್ರ ಸಂಪರ್ಕ ಪತ್ತೆಹಚ್ಚುವಿಕೆಯನ್ನು ಮಾಡಿದೆಯೇ?**

ಹೌದು.

ಜಿಲ್ಲೆಗೆ ನೀಡುತ್ತಿರುವ ಗುರಿಯು ಹಂತಹಂತವಾಗಿ ಹೆಚ್ಚಾಗುತ್ತಿರುವುದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಯನ್ನು ಮಾಡಿಸಲು ಜಿಲ್ಲಾಡಳಿತವು ಕ್ರಮ ಕೈಗೊಂಡಿರುತ್ತದೆ. ಕಳೆದ ಒಂದು ತಿಂಗಳಲ್ಲಿ positivity rate ಕಡಿಮೆಯಾಗುತ್ತಿದ್ದರೂ ಸಹ positive ಆಗಿರುವ ಪ್ರಕರಣಗಳು ಹೆಚ್ಚಾಗಿರುವುದರಿಂದ ಎಲ್ಲಾ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರ ಪತ್ತೆಹಚ್ಚುವಿಕೆ ಕಾರ್ಯ ತುಂಬಾ ಕಷ್ಟಕರವಾಗಿರುತ್ತದೆ.

5) **ಕಾಂಟ್ಯಾಕ್ಟ್ ಟ್ರೇಸಿಂಗ್‌ನಲ್ಲಿ ಯಾವುದೇ ನ್ಯೂನತೆಗಳಿರುವ ಬಗ್ಗೆ ಸೂಚನೆ (೫೦ ಪದಗಳಿಗೆ ಮೀರದಂತೆ ವರದಿ)**

ಜಿಲ್ಲೆಗೆ ನೀಡುತ್ತಿರುವ ಗುರಿಯು ಹಂತಹಂತವಾಗಿ ಹೆಚ್ಚಾಗುತ್ತಿರುವುದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಯನ್ನು ಮಾಡಿಸಲು ಜಿಲ್ಲಾಡಳಿತವು ಕ್ರಮ ಕೈಗೊಂಡಿರುತ್ತದೆ. ಕಳೆದ ಒಂದು ತಿಂಗಳಲ್ಲಿ positivity rate ಕಡಿಮೆಯಾಗುತ್ತಿದ್ದರೂ ಸಹ positive ಆಗಿರುವ ಪ್ರಕರಣಗಳು ಹೆಚ್ಚಾಗಿರುವುದರಿಂದ ಎಲ್ಲಾ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರ ಪತ್ತೆ ಹಚ್ಚುವಿಕೆ ಕಾರ್ಯ ತುಂಬಾ ಕಷ್ಟಕರವಾಗಿರುತ್ತದೆ.

6) **ಪ್ರಾಥಮಿಕ ಸಂಪರ್ಕಗಳನ್ನು ಪ್ರತ್ಯೇಕವಾಗಿ ಇರಿಸಲಾಗಿರುವ ಆಸ್ಪತ್ರೆಗಳು ಮತ್ತು ಹಾಸ್ಟೆಲ್‌ಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆಯೇ?**

**ಇವೆ.**

**ಈಗ ಕೋವಿಡ್ ಪಾಸಿಟಿವ್ ಪ್ರಕರಣಗಳನ್ನು ಗೊತ್ತುಪಡಿಸಿದ ಆಸ್ಪತ್ರೆಗಳಲ್ಲದೇ, ಜಿಲ್ಲೆಯಲ್ಲಿರುವ ಇತರ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿಯೂ ಸಹ ಒಳರೋಗಿಯಾಗಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇದಲ್ಲದೇ 358 ಜನರಷ್ಟು (As on 02-10-2020) Home isolation ನಲ್ಲಿ ಹಾಗೂ 100 ರಷ್ಟು ಜನ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಎಲ್ಲಾ ಕೇಂದ್ರಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಲು ಜಿಲ್ಲಾಡಳಿತದಿಂದ ಉತ್ತಮ ರೀತಿಯಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತಿದೆ.**



Scanned with CamScanner

7) ಪ್ರತ್ಯೇಕತೆಯಿಂದ ಬಿಡುಗಡೆಯಾಗುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ 12 ದಿನದ ಪರೀಕ್ಷೆಗಳನ್ನು ಮಾಡಲಾಗಿದೆಯೇ?

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇತ್ತೀಚಿನ ಎಸ್.ಓ.ಪಿ ಯಂತೆ ಕ್ರಮ ವಹಿಸಲಾಗಿರುತ್ತದೆ.

## II. ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳು:

1) ಎಲ್ಲಾ ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳನ್ನು ವಿವಿಧ ಕೋವಿಡ್ ಧನಾತ್ಮಕ ಪ್ರಕರಣಗಳನ್ನು ಅವುಗಳನ್ನು ಗುರುತಿಸಿದ 28 ದಿನಗಳ ಒಳಗೆ ನೋಟಿಫೈ ಮಾಡಲಾಗಿದೆಯೇ?

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇತ್ತೀಚಿನ ಎಸ್.ಓ.ಪಿಯಂತೆ ಕ್ರಮ ವಹಿಸಲಾಗಿರುತ್ತದೆ.

2) ನೀವು ಎಲ್ಲಾ ಕಂಟೈನ್‌ಮೆಂಟ್ ವಲಯದ ನಕ್ಷೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಕೆಲವನ್ನು ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಭೇಟಿ ಮಾಡಿದ್ದಿರಾ.

ಕಂಟೈನ್‌ಮೆಂಟ್ ವಲಯಗಳು ಅತಿ ಹೆಚ್ಚಾಗಿರುವುದರಿಂದ ಹಾಗೂ ಇಡೀ ಜಿಲ್ಲೆಯಾದ್ಯಂತ ಚದುರಿರುವುದರಿಂದ, ಎಲ್ಲಾ ವಲಯಗಳಿಗೆ ಭೇಟಿ ಮಾಡಲು ಸಾಧ್ಯವಾಗಿರುವುದಿಲ್ಲ.

3) ಕಂಟೈನ್‌ಮೆಂಟ್ ಮತ್ತು ಬಫರ್ ವಲಯಕ್ಕೆ Incident Commander/ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅವರನ್ನು ನೇಮಿಸಲಾಗಿದೆಯೇ?

ಹೌದು.

4) ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳಲ್ಲಿ ILIs/SARI ಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಕಣ್ಗಾವಲು ವ್ಯವಸ್ಥೆ ಇದೆಯೇ?

ILIs/SARI ಸೇರಿದಂತೆ co-morbidities ಇರುವ ಜನರ ಮೇಲ್ವಿಚಾರಣೆಯನ್ನು ಸಂಬಂಧಿಸಿದ ಪ್ರಾಥಮಿಕ ಕೇಂದ್ರಗಳ ವ್ಯಾಪ್ತಿಯಲ್ಲಿನ ಆರೋಗ್ಯ ಕಾರ್ಯಕರ್ತೆಯರು ಮಾಡುತ್ತಿದ್ದಾರೆ.

## III. ಕೋವಿಡ್‌ಗಾಗಿ ಕಣ್ಗಾವಲು ಮತ್ತು ಸೌಲಭ್ಯಗಳು.

1) ಗೊತ್ತುಪಡಿಸಿದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾದ ಮಾದರಿಗಳ ಕುರಿತು ಯಾವುದೇ ವರದಿಗಳು ಜಿಲ್ಲೆಯಲ್ಲಿ ಬಾಕಿ ಉಳಿದಿವೆಯೇ?

ದಿನಾಂಕ 02/10/2020 ರಂತೆ 528 ಪ್ರಕರಣಗಳ ವರದಿಗಳು ಬಾಕಿ ಉಳಿದಿವೆ.



Scanned with CamScanner

2) ಆರೋಗ್ಯ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯ ಪ್ರಕಾರ ಆರೋಗ್ಯ ಕಾರ್ಯಕರ್ತರು/ ಆರೋಗ್ಯ ಸಿಬ್ಬಂದಿಗೆ Hydroxy Chloroquine Sulphate (HCQ) ನೀಡಲಾಗಿದೆಯೇ?

ಪ್ರಸ್ತುತ ಅನ್ವಯವಾಗುವುದಿಲ್ಲ.

3) ನೀವು ಮೀಸಲಿರುವ ಕೋವಿಡ್ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೀರಾ?

ಇಲ್ಲ.

4) ನೀವು ಮೀಸಲಿರುವ ಕೋವಿಡ್ ಆಸ್ಪತ್ರೆಯನ್ನು ವೀಕ್ಷಣೆ ಮಾಡಿ ಆಗಮಿಸಿದ ಅಂಶಗಳು (50 ಪದಗಳಿಗೆ ಮೀರದಂತೆ ವರದಿ)

ಆರೋಗ್ಯ ಇಲಾಖೆಯಲ್ಲಿ ತರಬೇತಿ, ಶಿಸ್ತು, ವೇತನ ಹಾಗೂ ಪ್ರೇರಣೆ ಹೊಂದಿರುವ ಖಾಯಂ ನೌಕರರರಿಂದ ಉತ್ತಮ ಕಾರ್ಯಕ್ಷಮತೆಯನ್ನು ನಿರೀಕ್ಷಿಸಬಹುದಾಗಿರುತ್ತದೆ.

ಆದರೆ ಗುತ್ತಿಗೆ ಹಾಗೂ ಹೊರಗುತ್ತಿಗೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ತರಬೇತಿ, ಶಿಸ್ತು ಹಾಗೂ ಪ್ರೇರಣೆಯ ಕೊರತೆ ಇರುವುದರಿಂದ ಹಾಗೂ ಕಡಿಮೆ ಸಂಭಾವನೆ ಇರುವುದರಿಂದ ಇದೇ ರೀತಿಯ ಕಾರ್ಯಕ್ಷಮತೆಯನ್ನು ದೀರ್ಘಕಾಲದವರೆಗೆ ನಿರೀಕ್ಷೆ ಮಾಡುವುದು ಕಷ್ಟಕರವೆಂಬುದನ್ನು ಈ ಕೋವಿಡ್-19ರ ಪಿಡುಗಿನ ಪರಿಸ್ಥಿತಿಯು ಕಲಿಸುತ್ತದೆ. ಆದ್ದರಿಂದ ಆರೋಗ್ಯ ಇಲಾಖೆಯಲ್ಲಿ ಹೊಸ ಹುದ್ದೆಗಳನ್ನು ಸೃಜಿಸುವುದು ಮತ್ತು ನೇಮಕಾತಿ ಮಾಡಿಕೊಳ್ಳಬಹುದಾಗಿರುತ್ತದೆ.

5) ರಾಜ್ಯವು ನೀಡಿದ ಗುರಿಗಳ ಪ್ರಕಾರ ಕಂಟಿಜೆನ್ಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ?

ಹೌದು.

6) (ಎ) ಕಂಟಿಜೆನ್ಸಿ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುರುತಿಸಲಾಗಿದೆಯೇ?

ಹೌದು.

7) (ಬಿ) ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆಯೇ?

ನೀಡಲಾಗಿದೆ.



Scanned with CamScanner

**ಒಟ್ಟಾರೆ ವೀಕ್ಷಿಸಿದ ಅಂಶಗಳು:**

1. ಜಿಲ್ಲೆಯಲ್ಲಿ ಶಾಲೆಗಳು ಇನ್ನೂ ಪ್ರಾರಂಭವಾಗದೇ ಇರುವುದರಿಂದ ಮಕ್ಕಳಿಗೆ ನೀಡಬೇಕಾಗಿರುವ ಮಧ್ಯಾಹ್ನ ಉಪಹಾರ ಯೋಜನೆಯಡಿಯಲ್ಲಿ ಮಧ್ಯಾಹ್ನ ಭೋಜನ ಆಗಲೀ ಅಥವಾ ಮಾರ್ಚ್ ಮತ್ತು ಏಪ್ರಿಲ್, 2020ರ ಮಾಹೆಗಳಲ್ಲಿ ನೀಡಿರುವಂತೆ, ಒಣ ದಿನಸಿ ದವಸಧಾನ್ಯಗಳ ಪ್ಯಾಕೆಟ್‌ಗಳನ್ನು ನೀಡಿರುವುದಿಲ್ಲ.
2. ಮಳೆ ಸತತವಾಗಿ ಬರುತ್ತಿದ್ದರೂ ಸಹ ಎಲ್ಲಾ ಕಡೆ ಕೃಷಿ ಚಟುವಟಿಕೆಗಳು ಮುಂದುವರೆದಿರುತ್ತವೆ. ಹೊಸದಾಗಿ ಪರಿಚಯಿಸಿರುವ 'ಬೆಳೆ ದರ್ಶನ್' ತಂತ್ರಾಂಶದಲ್ಲಿ 55% ರೈತರು ಅವರವರ ಬೆಳೆಗಳನ್ನು ಇಂದೀಕರಣ ಮಾಡಿರುತ್ತಾರೆ. ಆದರೇ ಕೃಷಿ ಭೂಮಿಯಲ್ಲಿ ನೀರು ನಿಂತಿರುವುದರಿಂದ Crop cutting survey ಎಲ್ಲಾ ಕಡೆ ಆಗಿರುವುದಿಲ್ಲ.

   ಜೋಳದ ಕೊಯ್ಲಿನ ಸಮಯವಾಗಿದ್ದು, ಕನಿಷ್ಠ ಬೆಂಬಲ ಬೆಲೆ ಘೋಷಣೆಯಾಗದಿರುವುದು ಕೆಲವು ರೈತರಲ್ಲಿ ಅಸಮಾಧಾನ ಉಂಟು ಮಾಡಿರುತ್ತದೆ. ಇದಲ್ಲದೇ ಕೊಯ್ಲು ಪೂರ್ಣವಾದ ಬಹಳ ದಿನಗಳ ನಂತರ ಕನಿಷ್ಠ ಬೆಂಬಲ ಬೆಲೆ ಘೋಷಣೆಯಾಗುವುದರಿಂದ ರೈತರಿಗೆ ಸರ್ಕಾರದಿಂದ ಕನಿಷ್ಠ ಬೆಂಬಲ ಬೆಲೆಯು ನೀಡುವುದರಿಂದ ಸಿಗಬಹುದಾಗಿರುವ ಬೆಂಬಲ ದೊರೆಯುತ್ತಿಲ್ಲ.
3. ಸರ್ಕಾರದ ಕಾರ್ಯದರ್ಶಿಗಳು ನೀಡಿರುವ ನಿರ್ದೇಶನಗಳಂತೆ ಆರ್.ಐ.ಡಿ.ಎಫ್-25 ಯೋಜನೆಯಡಿಯಲ್ಲಿ ಪೂರ್ಣಗೊಳಿಸಬೇಕಾಗಿರುವ ಅಂಗನವಾಡಿ ಕಟ್ಟಡ ಕಾಮಗಾರಿಗಳು ಶೀಘ್ರದಲ್ಲಿ ಪೂರ್ಣಗೊಳಿಸುವಂತೆ ಸಭೆಯಲ್ಲಿ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗಿರುತ್ತದೆ. ಇದಲ್ಲದೇ Public Lands Corporation ವತಿಯಿಂದ ನೀಡಿರುವ ನಿರ್ದೇಶನದಂತೆ ತೆರವುಗೊಳಿಸಬೇಕಾಗಿರುವ 04 ಅತಿಕ್ರಮಣವಾಗಿರುವ ನಿವೇಶನವನ್ನು ತೆರವುಗೊಳಿಸಲು ನಿರ್ದೇಶನ ನೀಡಲಾಯಿತು.
4. ಸಮಾಜ ಕಲ್ಯಾಣ ಇಲಾಖೆ ನೀಡಿರುವ ನಿರ್ದೇಶನದಂತೆ ಮ್ಯಾನುವಲ್ ಸ್ಕ್ಯಾವೆಂಜರ್ ಕಾಯ್ದೆ-2013ರಡಿಯಲ್ಲಿ ಮಾಡಬೇಕಾಗಿರುವ ಸಮೀಕ್ಷಾ ಕಾರ್ಯಗಳು ಪೂರ್ಣಗೊಂಡಿರುವ ಕುರಿತು ಸಭೆಯಲ್ಲಿ ಖಚಿತಪಡಿಸಿಕೊಳ್ಳಲಾಯಿತು.
5. ಪಿ.ಎಮ್. ಸ್ವ-ನಿಧಿ ಕಾರ್ಯಕ್ರಮದಡಿಯಲ್ಲಿ ಗದಗ ಜಿಲ್ಲೆಯ ಎಲ್ಲಾ ಬೀದಿ ಬದಿಯ ಸಣ್ಣ ವ್ಯಾಪಾರಿಗಳಿಗೆ ಮೇಲ್ಕಂಡ ಸ್ಕೀಮ್‌ನ ಸವಲತ್ತುಗಳನ್ನು ಪಡೆದುಕೊಳ್ಳುವಲ್ಲಿ ಒಳ್ಳೆಯ ಪ್ರಗತಿಯಾಗಿರುತ್ತದೆ.



Scanned with CamScanner

6. ಕೋವಿಡ್-19 ತಡೆಗಟ್ಟುವ ಮುಂಜಾಗ್ರತಾ ಕ್ರಮದ ಹಿನ್ನೆಲೆಯಲ್ಲಿ ಮಾಸ್ಕ್ ಧರಿಸದೇ ಇರುವವರಿಗೆ ವಿಧಿಸುವ ದಂಡದ ಪ್ರಮಾಣ ಹೆಚ್ಚು ಪ್ರಮಾಣದಲ್ಲಿರುವುದರಿಂದ ಅದನ್ನು ಅನುಷ್ಠಾನಕ್ಕೆ ತರುವುದು ಕಷ್ಟಕರವಾಗಿರುತ್ತದೆಂದು ಸಭೆಯಲ್ಲಿ PD (DUDC) ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.

7. ಕಳೆದ ಒಂಭತ್ತು ದಿನಗಳಿಂದ ಆರೋಗ್ಯ ಇಲಾಖೆಯ ಕೆಲವು ಸಿಬ್ಬಂದಿಗಳು ಮುಷ್ಕರದಲ್ಲಿದ್ದರೂ ಕೂಡ ಜಿಲ್ಲಾಡಳಿತವು ಲಭ್ಯವಿರುವ ಮಾನವ ಸಂಪನ್ಮೂಲಗಳ ಮೂಲಕ ಹಾಗೂ ಇತರೆ ನೆರೆಹೊರೆ ಜಿಲ್ಲೆಗಳಿಂದ ಟೆಸ್ಟ್‌ಗಳನ್ನು ಮಾಡಿರುವುದರಿಂದ ಟೆಸ್ಟಿಂಗ್ ರೇಟ್ ತುಂಬಾ ಕಡಿಮೆಯಾಗಿರುವುದಿಲ್ಲ. ಜಿಲ್ಲಾಡಳಿತದ ಈ ಕ್ರಮವು ಪ್ರಶಂಶನೀಯವಾಗಿರುತ್ತದೆ.

(ಡಾ॥ಎಂ.ಟಿ.ರೇಜು, ಭಾ.ಆ.ಸೇ.,)
ಅಭಿಯಾನ ನಿರ್ದೇಶಕರು
ಸಂಜೀವಿನಿ-ಎನ್.ಎಲ್.ಎಮ್, ಬೆಂಗಳೂರು
ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

Scanned with CamScanner

ಎ.ಬಿ. ಇಬ್ರಾಹಿಂ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ

ಕರ್ನಾಟಕ ಸರ್ಕಾರದ ಸಚಿವಾಲಯ
ಅಲ್ಪಸಂಖ್ಯಾತರ ಕಲ್ಯಾಣ,
ಹಜ್ ಮತ್ತು ವಕ್ಫ್ ಇಲಾಖೆ

**ದಿನಾಂಕ: 19.09.2020 ಯಾದಗಿರಿ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಜಿಲ್ಲೆಯ ಇತರ ಹಿರಿಯ ಅಧಿಕಾರಿಗಳ ಜೊತೆ ಕೋವಿಡ್-19 ನೆರೆಪರಿಹಾರ ಸಮಸ್ಯೆಗಳು ಹಾಗೂ ಇತರ ನಡವಳಿಗಳು.**

ಕೋವಿಡ್-19 ವಿಷಯಗಳ ಬಗ್ಗೆ ಸಮಗ್ರವಾಗಿ ಪರಿಶೀಲಿಸಲಾಯಿತು. ಈಗಾಗಲೇ ಜಿಲ್ಲೆಯಲ್ಲಿ ಒಟ್ಟು.

- 72, 728 ಜನರಿಗೆ ಪರೀಕ್ಷೆ ಮಾಡಲಾಗಿರುತ್ತದೆ.
- ಅದರಲ್ಲಿ ಒಟ್ಟು ಸಕಾರಾತ್ಮಕ (Positive) ಪ್ರಕರಣಗಳು 7505 ,
- ಒಟ್ಟು ನಕಾರಾತ್ಮಕ (Negative) ಪಕ್ರರಣಗಳು 64,672
- ಈತನಕ ಒಟ್ಟು 49 ಮಂದಿ ಮೃತರಾಗಿರುತ್ತಾರೆ.
- ಹಾಲಿ 1102 ಸಕ್ರೀಯ ಪ್ರಕರಣಗಳು ಇರುತ್ತದೆ.
- ಸಧ್ಯಕ್ಕೆ ಜಿಲ್ಲೆಯಲ್ಲಿ Positivity Rate ಶೇಕಡಾ 10.2 ಇರುತ್ತದೆ.
- ಮೃತಪಟ್ಟವರಲ್ಲಿ 7 ಜನ Co-morbidity ಪ್ರಕರಣವಾಗುತ್ತದೆ.
- ಮೃತಪಟ್ಟವರಲ್ಲಿ 9 ಜನರು 16 ರಿಂದ 50 ವಯಸ್ಸಿನವರಾಗಿರುತ್ತಾರೆ.
- ಉಳಿದವರು 50 ವರ್ಷಕ್ಕಿಂತ ಮೇಲ್ಪಟ್ಟವರಾಗಿರುತ್ತಾರೆ.

ಜಿಲ್ಲೆಯಲ್ಲಿ ಕೋವಿಡ್ ತಡೆಗಟ್ಟುವ ಬಗ್ಗೆ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ಆಕ್ಸಿಜನ್ ಸರಬರಾಜಿನಲ್ಲಿ ಯಾವುದೇ ಕೊರತೆ ಇರುವುದಿಲ್ಲ. ಜಿಲ್ಲೆಯಲ್ಲಿ ತಜ್ಞ ವೈಧ್ಯರ ಹಾಗೂ ತಾಂತ್ರಿಕ ಸಿಬ್ಬಂದಿಗಳ ಕೊರತೆ ಇರುತ್ತದೆ.

ಮೃತಪಟ್ಟವರನ್ನು ಶಿಷ್ಟಾಚಾರ ಪ್ರಕಾರ ಅಂತ್ಯಕ್ರಿಯೆ ಮಾಡಲು ಪ್ರತಿ ತಾಲ್ಲೂಕಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲು ಸೂಚಿಸಲಾಯಿತು. ಅದೇ ರೀತಿ ಯಾವುದೇ ಕುಟುಂಬದ ದುಡಿಯುವ ವ್ಯಕ್ತಿ ರೋಗಭಾದಿತರಾಗಿದ್ದಲ್ಲಿ ಇವರಿಗೆ ಸುಮಾರು ಒಂದು ತಿಂಗಳ ಕಾಲ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಇಂತಹ ಕುಟುಂಬಗಳಿಗೆ ಆಹಾರ ಖಾತ್ರಿ ಮಾಡುವ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ಮಕ್ಕಳಿಗೆ Open School Class ತೆರೆಯಲು ಅನವು ಮಾಡಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ ವಾಡಿಕೆಗಿಂತ ಶೇಕಡಾ 44ರಷ್ಟು ಹೆಚ್ಚು ಮಳೆ ಆಗಿದ್ದು ಕೆಲವು ತಗ್ಗು ಪ್ರದೇಶದಲ್ಲಿ ಕೃಷ್ಣಾ ನದಿಯಿಂದಾಗಿ ಪ್ರವಾಹದ ಪರಿಸ್ಥಿತಿ ಇರುತ್ತಿದೆ.

ಕೊಠಡಿ ಸಂಖ್ಯೆ: 205, 2ನೇ ಮಹಡಿ, ವಿಕಾಸಸೌಧ, ಬೆಂಗಳೂರು – 560 001
ಕಛೇರಿ: 080-22200623/22034440, ಫ್ಯಾಕ್ಸ್: 080-22257602, ಇ-ಮೇಲ್ : secy-mw@karnataka.gov.in

ಶೇಕಡಾ 90 ರಷ್ಟು ಬಿತ್ತನೆ ಆಗಿದ್ದು, ಸುಮಾರು 16 ಸಾವಿರ ಹೆಕ್ಟರಷ್ಟು ಕೃಷಿ ನಾಶ ಸಂಭವಿಸಲಾಗಿರುತ್ತದೆ. ನಾಶ ನಷ್ಟದ ಅಂದಾಜು ಮೊತ್ತ ರೂ. 36 ಕೋಟಿ ಆಗಿರುತ್ತದೆ.

ಒಟ್ಟು ರೂ. 11 ಕೋಟಿ ರೂಪಾಯಿಗಳ ನಷ್ಟ ಪರಿಹಾರ ಪ್ರಸ್ತಾವನೆಗಳಿರುತ್ತದೆ. ಪಿ.ಡಿ. ಖಾತೆಯಲ್ಲಿ ರೂ. 7 ಕೋಟಿ ಇರುತ್ತದೆ. ವಿವಿಧ ಇಲಾಖೆಗಳ ಆಸ್ತಿಪಾಸ್ತಿಗಳ ನಷ್ಟದ ಬಗ್ಗೆ ಅಂದಾಜು ಮಾಡಲಾಗಿದ್ದು, ಇವುಗಳಲ್ಲಿ ವಿದ್ಯುತ್ Transformerಗಳು, ವಿದ್ಯುತ್ತಿನ ಕಂಬಗಳು ಹಾಗೂ ಲೈನುಗಳು, ಗ್ರಾಮೀಣ ರಸ್ತೆಗಳು ಸೇತುವೆಗಳು, PWD ರಸ್ತೆಗಳು, ಜಿಲ್ಲಾ ರಸ್ತೆಗಳು ಒಳಗೊಂಡಿರುತ್ತದೆ. ಯಾವುದೇ ಜನರಿಗೆ ಜೀವ ಹಾನಿ ಸಂಭವಿಸಿರುವುದಿಲ್ಲ. ಸುಮಾರು ರೂ. 17 ಕೋಟಿ ನಷ್ಟಗಳ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ.

ಜಿಲ್ಲೆಯಲ್ಲಿ ಕೆಲವೊಂದು ಪ್ರವಾಹಪೀಡಿತ ಪ್ರದೇಶಗಳ ಕೃಷಿ ಅಧಿಕಾರಿಗಳು ಮತ್ತು ತಹಶೀಲ್ದಾರರ ಜೊತೆ ಭೇಟಿ ನೀಡಲಾಯಿತು.

**ದಿನಾಂಕ:19.09.2020**

**(ಎ.ಬಿ. ಇಬ್ರಾಹಿಂ)**
ಸರ್ಕಾರದ ಕಾರ್ಯದರ್ಶಿಗಳು ಅಲ್ಪಸಂಖ್ಯಾತರ
ಕಲ್ಯಾಣ ಇಲಾಖೆ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು

**ಇವರಿಗೆ:**

**ಮುನೀಶ್ ಮೌದಗಿಲ್**
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಆಡಳಿತ ಸುಧಾರಣೆ)
ಬಹುಮಹಡಿ ಕಟ್ಟಡ
ಬೆಂಗಳೂರು.

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.

## -: ಚಿಕ್ಕಬಳ್ಳಾಪುರ ಜಿಲ್ಲೆ :-

| ಕ್ರ. ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1. | ಜಿಲ್ಲೆಯ ಹೆಸರು | ಚಿಕ್ಕಬಳ್ಳಾಪುರ |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಮನೋಜ್ ಕುಮಾರ್ ಮೀನಾ ಭಾ.ಆ.ಸೇ. |
| 3. | ಭೇಟಿಯಾದ /ಪ್ರವಾಸದ ದಿನಾಂಕ | 11ನೇ ಸೆಪ್ಟೆಂಬರ್ 2020 |
| 4. | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು. | 1. **ಕೋವಿಡ್-19**:<br>• ಕೋವಿಡ್-19 ಸೋಂಕಿತರ ಸಂಖ್ಯೆ: 5407 ದೃಢಪಟ್ಟಿದ್ದು, ಇಲ್ಲಿಯವರೆವಿಗೂ 4387 ಸೋಂಕಿತರು ಗುಣಮುಖರಾಗಿದ್ದು, Recovery Rate ಶೇ.81% ಇದ್ದು, ಕೋವಿಡ್-19 ಸೋಂಕಿನಿಂದ ಈವರೆವಿಗೂ 70 ಸೋಂಕಿತರು ಮರಣಹೊಂದಿದ್ದು, Fatality Rate ಶೇ.1.3% ಇದ್ದು, Active Cases 949 ಇದರಲ್ಲಿ DCHC-97, DCH-108, CCC-271, Homecare-429, Refer to Bengaluru-2, Other District-42.<br>• ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲೆಯಲ್ಲಿನ ILI/SARI ಪ್ರಕರಣಗಳು ಹಾಗೂ ಪರೀಕ್ಷೆಯ ಬಗ್ಗೆ ವಿವರಿಸಲು ತಿಳಿಸಿದರು.<br>• ILI ಪ್ರಕರಣಗಳು-8297 ದೃಢಪಟ್ಟಿದ್ದು, ಇದರಲ್ಲಿ 4528 ಪ್ರಕರಣಗಳು ಪರೀಕ್ಷೆಗೆ ಒಳಪಟ್ಟಿದ್ದು ಹಾಗೂ SARI ಪ್ರಕರಣಗಳು-1128 ದೃಢಪಟ್ಟಿದ್ದು, ಇದರಲ್ಲಿ 1061 ಪ್ರಕರಣಗಳಿಗೆ ಪರೀಕ್ಷೆ ಮಾಡಿಸಲಾಗಿರುತ್ತದೆ. ILI/SARI ಪ್ರಕರಣಗಳು ಆದ್ಯತೆಯ ಮೇರೆಗೆ Remdisivar injection ನೀಡಲು ಸೂಚಿಸಲಾಯಿತು.<br>• ಈವರೆವಿಗೂ ಒಟ್ಟಾರೆಯಾಗಿ 90636 ಘಂಟಲು ದ್ರವ ಪರೀಕ್ಷೆ ಮಾಡಲಾಗಿದ್ದು, ಈ ಪೈಕಿ 5407 ಸೋಂಕು ದೃಢಪಟ್ಟಿರುತ್ತದೆ. ಆರ್.ಟಿ.ಪಿ.ಸಿ.ಆರ್ ನಲ್ಲಿ 52148 ಪರೀಕ್ಷೆ ಮಾಡಲಾಗಿದ್ದು, ಇದರಲ್ಲಿ ಶೇ.5.78% Positivity Rate ಕಂಡುಬರುತ್ತಿದೆ. |

- ಕೋವಿಡ್‌–19 ನಿಯಂತ್ರಣಕ್ಕೆ ಅಗತ್ಯವಿರುವ ಔಷಧಿಗಳ ಮತ್ತು ಪರಿಕರಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ಜಿಲ್ಲೆಯ ಪ್ರಕ್ಯೂರ್‌ಮೆಂಟ್ ಕಮಿಟಿಯನ್ನು ಪ್ರತಿ 15 ದಿನಗಳಿಗೆ ಒಮ್ಮೆ ಸಭೆಯನ್ನು ಏರ್ಪಡಿಸಿ, ಮುಂಜಾಗೃತ ಕ್ರಮವಾಗಿ ಮುಂದಿನ 15 ದಿನಗಳಿಗೆ ಅವಶ್ಯಕವಿರುವ ಸಾಮಗ್ರಿಗಳನ್ನು ಟೆಂಡರ್ ಮುಖಾಂತರ ಖರೀದಿಸಲು ಹಾಗೂ ಪರಿಕರಗಳನ್ನು ಪ್ರಕ್ಯೂರ್‌ಮೆಂಟ್‌ನಲ್ಲಿ ಯಾವುದೇ ಲೋಪ–ದೋಷಗಳು ಇಲ್ಲದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- ಕೋವಿಡ್‌–19 ನಿಯಂತ್ರಣಕ್ಕೆ RTPCR & RAT ಮೂಲಕ ಹೆಚ್ಚಿನ ಮಾದರಿಗಳನ್ನು ಸಂಗ್ರಹಿಸಿ ನಿಗಧಿಪಡಿಸಿರುವ ಗುರಿಗೆ ಅನುಗುಣವಾಗಿ ಪ್ರಗತಿ ಸಾಧಿಸಿ ಮರಣ ಪ್ರಮಾಣಗಳನ್ನು ಕಡಿಮೆ ಮಾಡಲು ಸೂಚಿಸಲಾಯಿತು.
- ಕೋವಿಡ್ ರೋಗಿಗಳಿಗೆ ಹತ್ತಿರದಲ್ಲಿಯೇ ಚಿಕಿತ್ಸೆ ಲಭ್ಯವಾಗಿ ಮರಣಗಳನ್ನು ನಿಯಂತ್ರಿಸಲು ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು DCHC ಚಿಕಿತ್ಸೆಗಳನ್ನಾಗಿ ತೆರೆದು ಚಿಕಿತ್ಸೆ ನೀಡುತ್ತಿದ್ದು, DCH-150 ಹಾಸಿಗೆಗಳು, DCHC-526 ಹಾಸಿಗೆಗಳು, CCC-10498 ಹಾಸಿಗೆಗಳು ಹಾಗೂ DCH ಮತ್ತು DCHC ಯಲ್ಲಿ 27–ಐ.ಸಿ.ಯು ಹಾಸಿಗೆಗಳು, 31–ವೆಂಟಿಲೇಟರ್ಸ್ ಅನ್ನು ಸೋಂಕಿತರಿಗೆ ಉತ್ತಮವಾಗಿ ಚಿಕಿತ್ಸೆ ನೀಡಲು ಸೂಚಿಸಲಾಯಿತು.
- Co-morbidity & Vulnerable group ವ್ಯಕ್ತಿಗಳ ಸಮೀಕ್ಷೆ ನಡೆಸಿ, ತ್ವರಿತ ಪರೀಕ್ಷೆ ನಡೆಸಿ, ಶೀಘ್ರವಾಗಿ ಚಿಕಿತ್ಸೆ ನೀಡುತ್ತಿರುವುದರಿಂದ ಮರಣ ಪ್ರಮಾಣ ಕಡಿಮೆ ಮಾಡಲು ಸೂಚಿಸಲಾಯಿತು.
- ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ, ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಿರಂತರವಾಗಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಹಾಗೂ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾದಿಕಾರಿಗಳ ಸಭೆಯನ್ನು ನಡೆಸಿ, ತಾಯಿ ಮತ್ತು ಶಿಶು ಮರಣ ಆಗದಂತೆ ಕ್ರಮ ಕೈಗೊಳ್ಳುತ್ತಿರುವುದಾಗಿ ವಿವರಿಸಿದರು. ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಕೋವಿಡ್‌–19 ನಿಯಂತ್ರಣದ ಜೊತೆ ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿದರು.
- ಹಾಗೆಯೇ ಜಿಲ್ಲೆಯಲ್ಲಿನ ಇತರೆ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳು ಕುಂಟಿತವಾಗದಂತೆ ನೋಡಿಕೊಳ್ಳುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ತಿಳಿಸಲಾಯಿತು.

2. **ಕಂದಾಯ ಇಲಾಖೆ:**

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಾಕಿಯಿರುವ ಪಹಣಿ ಕಾಲಂ 3 & 9 ಕ್ಕೂ ತಾಳೆಯಿಲ್ಲದ ಒಟ್ಟು 3794 ಪ್ರಕರಣಗಳಿದ್ದು, ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳುವುದರ ಮೂಲಕ ಎಲ್ಲಾ ತಹಶೀಲ್ದಾರ್‌ಗಳು ತುರ್ತಾಗಿ ವಿಲೇವಾರಿಗೊಳಿಸಲು ಸೂಚಿಸಲಾಯಿತು.
- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 94ಸಿ ಯೋಜನೆಯಡಿಯಲ್ಲಿ ಒಟ್ಟು 8537 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 8218 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಬಾಕಿ 319 ಅರ್ಜಿಗಳು ಇರುತ್ತವೆ. ಬಾಕಿ ಉಳಿಸಿಕೊಂಡಿರುವ ಚಿಕ್ಕಬಳ್ಳಾಪುರ, ಗೌರಿಬಿದನೂರು, ಶಿಡ್ಲಘಟ್ಟ

| | | |
|---|---|---|
| | | ತಾಲ್ಲೂಕು ತಹಶೀಲ್ದಾರ್ ರವರುಗಳು ಒಂದು ವಾರದಲ್ಲಿ ವಿಲೇವಾರಿ ಮಾಡಿ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>• ಜಿಲ್ಲೆಯಲ್ಲಿ 22 ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯವಿಲ್ಲದಿರುವುದು ಕಂಡುಬಂದಿದ್ದು, 10 ಗ್ರಾಮಗಳ ಪೈಕಿ 02 ಪ್ರಕರಣಗಳಿಗೆ ಗುಂಡುತೋಪು ಆಗಿರುವ ಕಾರಣ ಮಂಜೂರಾತಿಗಾಗಿ ಸರ್ಕಾರದ ಮಟ್ಟದಲ್ಲಿ ಬಾಕಿ ಇರುತ್ತದೆ. 05 ಗ್ರಾಮಗಳಿಗೆ ಕ.ಭೂ.ಅಧಿನಿಯಮ 1964ಕಲಂ 68(1) ರಡಿಯಲ್ಲಿ ಪ್ರಕ್ರಿಯೆಗಳನ್ನು ನಡೆಸಲು ಚಾಲ್ತಿಯಲ್ಲಿರುತ್ತದೆ. 20 ಗ್ರಾಮಗಳಿಗೆ ತಹಶೀಲ್ದಾರ್ ರವರಲ್ಲಿ ಬಾಕಿ ಇದ್ದು, ಎಲ್ಲಾ ಗ್ರಾಮಗಳಲ್ಲಿ ರುದ್ರಭೂಮಿ ಸೌಲಭ್ಯವನ್ನು ಒದಗಿಸಿ, ಅಭಿವೃದ್ಧಿಪಡಿಸಲು ಸೂಚಿಸಲಾಯಿತು.<br>• ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಆಧಾರ್ ಜೋಡಣೆಯಲ್ಲಿ ಶೇ.90% ರಷ್ಟು ಪ್ರಗತಿ ಸಾಧಿಸಿದ್ದು, ಬಾಕಿ ಇರುವ ಶೇ.10% ರಷ್ಟು ಪೂರ್ಣ ಪ್ರಮಾಣದಲ್ಲಿ ಆಧಾರ್ ಜೋಡಣೆ ಮಾಡಿ ಶೇ.100% ರಷ್ಟು ಸಾಧಿಸಲು ಸೂಚಿಸಲಾಯಿತು.<br>• ಪಿಂಚಣಿ ಸರಿಯಾದ ರೀತಿಯಲ್ಲಿ ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಪರಿಶೀಲನೆ ಮಾಡಲು ಹಾಗೂ ಬಾಕಿ ಉಳಿದಿರುವ ಕಡತಗಳನ್ನು ತುರ್ತಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.<br>• ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪೈಕಿ ಪಹಣಿಗಳನ್ನು ಒಟ್ಟುಗೂಡಿಸುವಲ್ಲಿ ಒಟ್ಟು 7380 ಪ್ರಕರಣಗಳು ಬಾಕಿ ಇದ್ದು, ಈ ಪ್ರಕರಣಗಳನ್ನು ತುರ್ತಾಗಿ ವಿಲೇವಾರಿಗೊಳಿಸಲು ಕ್ರಮ ಕೈಗೊಳ್ಳಲು ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ರವರಿಗೆ ತಿಳಿಸಲಾಯಿತು.<br>• ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಒತ್ತುವರಿ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ ಹಾಗೂ ಒಂದು ವಾರದಲ್ಲಿ 05 ಕೆರೆಗಳು ಮತ್ತು 05 ಸರ್ಕಾರಿ ಜಮೀನುಗಳ ಒತ್ತುವರಿಯನ್ನು ತೆರವುಗೊಳಿಸಲು ಗುರಿಯನ್ನು ನಿಗಧಿಪಡಿಸಲಾಗಿದೆ. ಪ್ರತಿ ಸೋಮವಾರ ಬೆಳಗ್ಗೆ 9.30 ರಿಂದ 10.30 ಗಂಟೆವರೆಗೆ ಜಿಲ್ಲೆಯ ಎಲ್ಲಾ ಕಂದಾಯ ಅಧಿಕಾರಿಗಳಿಗೆ ವೀಡಿಯೋ ಸಂವಾದ ಸಭೆಯನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.<br>**(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರ್, ಚಿಕ್ಕಬಳ್ಳಾಪುರ ಜಿಲ್ಲೆ.)**<br>3. **ತೋಟಗಾರಿಕೆ ಇಲಾಖೆ:**<br>• ಚಿಕ್ಕಬಳ್ಳಾಪುರ ಜಿಲ್ಲೆಯು ಹಣ್ಣು ಮತ್ತು ತರಕಾರಿ ಬೆಳೆಗಳನ್ನು ಬೆಳೆಯುತ್ತಿರುವ ಒಂದು ಪ್ರಮುಖ ಜಿಲ್ಲೆಯಾಗಿದೆ. ತೋಟಗಾರಿಕೆ ಬೆಳೆಗಳ ಒಟ್ಟು ವಿಸ್ತೀರ್ಣ 33655 ಹೆಕ್ಟೇರ್‌ನಲ್ಲಿ 16088 ಹೆಕ್ಟೇರ್ ಪ್ರದೇಶದಲ್ಲಿ ಹಣ್ಣಿನ ಬೆಳೆ, 11827 ಹೆಕ್ಟೇರ್ ಪ್ರದೇಶದಲ್ಲಿ ತರಕಾರಿ ಬೆಳೆ, 2216 ಹೆಕ್ಟೇರ್ ಪ್ರದೇಶದಲ್ಲಿ ತೋಟದ ಬೆಳೆ, 767 ಹೆಕ್ಟೇರ್ ಪ್ರದೇಶದಲ್ಲಿ ಸಾಂಬಾರು ಬೆಳೆ, 2670 ಹೆ. ಪ್ರದೇಶದಲ್ಲಿ ಹೂವಿನ ಬೆಳೆ, 83 ಹೆ. |

| | | |
|---|---|---|
| | | ಪ್ರದೇಶದಲ್ಲಿ ಸುಗಂಧಿತ ಸಸ್ಯಗಳನ್ನು ಬೆಳೆಯಲಾಗುತ್ತಿದೆ ಎಂದು ತೋಟಗಾರಿಕೆ ಉಪ ನಿರ್ದೇಶಕರು ವಿವರಿಸಿದರು.<br>• ಸೂಕ್ಷ್ಮ ಹನಿ ನೀರಾವರಿ ಯೋಜನೆಯಡಿ ಶೇ.90%ರಂತೆ ಗರಿಷ್ಟ 5 ಹೆಕ್ಟೇರ್‌ವರೆಗೂ ಸಹಾಯಧನ ನೀಡಲಾಗುತ್ತದೆ. 2007-08ನೇ ಸಾಲಿನಿಂದ 2019-20ನೇ ಸಾಲಿನವರೆಗೆ 16389.20 ಹೆಕ್ಟೇರ್ ನಷ್ಟು 20212 ಫಲಾನುಭವಿಗಳಿಗೆ ಹನಿ ನೀರಾವರಿ ವ್ಯಾಪ್ತಿಗೆ ಒಳಪಡಿಸಲಾಗಿದೆ.<br>• ಕೃಷಿಭಾಗ್ಯ ಯೋಜನೆಯಡಿ ರಾಜ್ಯದ ಮಳೆಯಾಶ್ರಿತ ತೋಟಗಾರಿಕೆಯನ್ನು ಸುಸ್ಥಿರ ತೋಟಗಾರಿಕೆಯನ್ನಾಗಿ ಪರಿವರ್ತಿಸಿ ಈಗಾಗಲೇ ಉತ್ತೇಜನ ನೀಡುತ್ತಿದ್ದು, ಹಸಿರುಮನೆ/ನೆರಳುಪರದೆ ಮನೆ ನಿರ್ಮಾಣಕ್ಕೆ ಪ್ರತಿ ಫಲಾನುಭವಿಗೆ ಗರಿಷ್ಟ 4000 ಚ.ಮೀ.ವರೆಗೆ ಸಹಾಯಧನ ನೀಡಲಾಗುತ್ತಿದೆ.<br>• ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ರೈತರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಬಡತನ ರೇಖೆಗಿಂತ ಕೆಳಗೆ ಇರುವ ರೈತರಿಗೆ ತಮ್ಮ ಸ್ವಂತ ಜಮೀನಿನಲ್ಲಿ ದುಡಿಮೆ ಮಾಡಿ ಹೊಸ ತೋಟ ಅಭಿವೃದ್ಧಿಪಡಿಸಿಕೊಳ್ಳುವುದರ ಜೊತೆಗೆ ಸರ್ಕಾರದಿಂದ ಕೂಲಿ ವೇತನ ಪಡೆಯಲು ಉತ್ತಮ ಅವಕಾಶವಿರುತ್ತದೆ. ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಾದ ಮಾವು, ಹುಣಸೆ, ನೇರಳೆ, ನುಗ್ಗೆ, ಗುಲಾಬಿ, ಗೋಡಂಬಿ, ಸಪೋಟ, ಸೀಬೆ, ದಾಳಿಂಬೆ ಬೆಳೆಗಳ ಹೊಸ ಪ್ರದೇಶ ವಿಸ್ತರಣೆ, ಪುನಃಶ್ಚೇತನ ಕಾರ್ಯಕ್ರಮ ಈರುಳ್ಳಿ ಶೇಖರಣಾ ಘಟಕಗಳ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನೀಲಗಿರಿ ಹಾವಳಿ ತೀವ್ರವಾಗಿದ್ದು, ನೀಲಗಿರಿಯನ್ನು ತೆಗೆದು ತೋಟಗಾರಿಕೆ ಬಹುವಾರ್ಷಿಕ ಬೆಳೆಗಳನ್ನು ಬೆಳೆಯಲು ಹಾಗೂ ಅನುತ್ಪಾದಕ ಮಾವು ಮತ್ತು ತೆಂಗು ಬೆಳೆಗಳ ಉತ್ಪಾದಕತೆ ಹೆಚ್ಚಿಸಲು ಪುನಃಶ್ಚೇತನ ಕಾರ್ಯಕ್ರಮಕ್ಕೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಯಡಿ ರೈತರಿಗೆ 2014-15 ನೇ ಸಾಲಿನಿಂದ ಸೆಪ್ಟೆಂಬರ್-2020 ರವರೆಗೆ ಈ ಯೋಜನೆಯಡಿ ಒಟ್ಟು 2305.561 ಹೆಕ್ಟೇರ್ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿ ಒಟ್ಟು 735206 ಮಾನವ ದಿನಗಳನ್ನು ಸೃಜಿಸಲಾಗಿರುತ್ತದೆ.<br>• ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊಸ ತೋಟಗಳ ಪ್ರದೇಶ ವಿಸ್ತರಣೆ, ಪುನಶ್ಚೇತನ, ನೀರು ಸಂಗ್ರಹಣಾ ಘಟಕಗಳಿಗೆ, ಪಾಲಿಹೌಸ್, ನೆರಳುಪರದೆ, ಪ್ಯಾಕ್‌ಹೌಸ್, ಈರುಳ್ಳಿ ಶೇಖರಣಾ |

ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದ್ದು, 2007-08ನೇ ಸಾಲಿನಿಂದ 2019-20ನೇ ಸಾಲಿನವರೆಗೆ 34398 ಫಲಾನುಭವಿಗಳಿಗೆ ಸಹಾಯಧನ ಸವಲತ್ತು ನೀಡಲಾಗಿದೆ ಎಂದು ತೋಟಗಾರಿಕೆ ಉಪ ನಿರ್ದೇಶಕರು ಸಭೆಯಲ್ಲಿ ವಿವರಿಸಿದರು.

4. **ಕೃಷಿ ಇಲಾಖೆ:**

- **ಮಳೆ ವರದಿ:** ಚಿಕ್ಕಬಳ್ಳಾಪುರ ಜಿಲ್ಲೆಯ ವಾರ್ಷಿಕ ಸಾಮಾನ್ಯ ಮಳೆ 731.3 ಮಿ.ಮೀ ಇದ್ದು 2019 ರಲ್ಲಿ 721.5 ಮಿ.ಮೀ ಮಳೆಯಾಗಿದ್ದು, ದಿನಾಂಕ: 28.09.2020ರ ಅಂತ್ಯಕ್ಕೆ ವಾಡಿಕೆ ಮಳೆ 512 ಮಿ.ಮೀ ಇದ್ದು ವಾಸ್ತವಿಕವಾಗಿ 696.1 ಮಿ.ಮೀ ಮಳೆಯಾಗಿರುತ್ತದೆ. (ಶೇ.36% ಹೆಚ್ಚಿನ ಮಳೆಯಾಗಿರುತ್ತದೆ).

- **ಬಿತ್ತನೆ ವಿವರಗಳು**: 2019ರ ಆಗಸ್ಟ್ ಮಾಹೆಯ ಅಂತ್ಯಕ್ಕೆ 108959 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು ಹಾಗೂ 2020 ರ ಸೆಪ್ಟೆಂಬರ್ 28 ರ ಅಂತ್ಯಕ್ಕೆ 133942 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಪ್ರಮುಖವಾಗಿ ರಾಗಿ, ಮುಸುಕಿನ ಜೋಳ, ನೆಲಗಡಲೆ, ತೊಗರಿ ಮತ್ತು ಅಲಸಂದೆ ಬಿತ್ತನೆಯಾಗಿರುತ್ತದೆ. (ಶೇ.95.06% ಬಿತ್ತನೆಯಾಗಿರುತ್ತದೆ)

- **ಬಿತ್ತನೆ ಬೀಜ ವಿತರಣೆ:** ಮುಂಗಾರು ಹಂಗಾಮಿಗೆ ಇಲಾಖೆಯಿಂದ ರಿಯಾಯಿತಿ ದರದಲ್ಲಿ ರಾಗಿ 910.7 ಕ್ವಿಂ. ತೊಗರಿ 280.8 ಕ್ವಿಂ. ನೆಲಗಡಲೆ 3179.1 ಕ್ವಿಂ. ಅಲಸಂದೆ 15.8 ಕ್ವಿಂ. ಮುಸುಕಿನ ಜೋಳ 1749.6 ಕ್ವಿಂ. ಹಾಗೂ ತೃಣ ಧಾನ್ಯಗಳು 4.3ಕ್ವಿಂ. ವಿತರಣೆಯಾಗಿದ್ದು, ಒಟ್ಟು ಜಿಲ್ಲೆಯಲ್ಲಿ 6140.2 ಕ್ವಿಂಟಲ್ ಬಿತ್ತನೆ ಬೀಜಗಳನ್ನು 37,323 ಫಲಾನುಭವಿಗಳು ಸಹಾಯಧನದಲ್ಲಿ ಪಡೆದಿರುತ್ತಾರೆ.

- **ಪ್ರಧಾನ ಮಂತ್ರಿಕಿಸಾನ್ ಸಮ್ಮಾನ್ ಯೋಜನೆ:** ಈ ಯೋಜನೆಯಡಿಒಟ್ಟು113186 ಫಲಾನುಭವಿಗಳು ನೋಂದಣಿಯಾಗಿದ್ದು, ಈಗಾಗಲೇ 6 ಕಂತುಗಳಲ್ಲಿ 105.82 ಕೋಟಿಗಳಷ್ಟು ರೈತರ ಖಾತೆಗೆ ನೇರವಾಗಿ ಜಮೆ ಮಾಡಲಾಗಿರುತ್ತದೆ.

- **ಮುಸುಕಿನ ಜೋಳ ಬೆಳೆದ ರೈತರಿಗೆ ಆರ್ಥಿಕ ಸಹಾಯಧನ:** ಈ ಯೋಜನೆಯಡಿ28838 ಫಲಾನುಭವಿಗಳಿಗೆ 14.41 ಕೋಟಿಗಳಷ್ಟು ಸಹಾಯಧನವನ್ನು ನೇರವಾಗಿ ರೈತರ ಖಾತೆಗಳಿಗೆ ಜಮೆ ಮಾಡಲಾಗಿರುತ್ತದೆ.

- **ಬೆಳೆ ಸಮೀಕ್ಷೆಯೋಜನೆ:** 2020-21 ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಯಡಿ ಮುಂಗಾರು ಹಂಗಾಮಿಗೆ 648321 ತಾಕುಗಳ ಗುರಿ ಹೊಂದಿದ್ದು, 583971 ತಾಕುಗಳ ಸಮೀಕ್ಷೆ ಕೈಗೊಂಡು ಶೇ.90.07% ರಷ್ಟು ಸಾಧನೆಯಾಗಿರುತ್ತದೆ.

- **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ:** ಈ ಯೋಜನೆಯಡಿ ಇಲಾಖೆಯಿಂದ 398145 ಮಾನವ ದಿನಗಳನ್ನು ಸೃಜನೆ ಮಾಡಲಾಗಿದ್ದು, ಒಟ್ಟುರೂ. 10.53 ಕೋಟಿಗಳಷ್ಟು ರೈತರ ಖಾತೆಗೆ ಜಮೆ ಮಾಡಲಾಗಿರುತ್ತದೆ. ಈ ಯೋಜನೆಯಡಿ 1467 ಕೃಷಿ ಹೊಂಡ, ಖುಷ್ಕಿ ತೋಟಗಾರಿಕೆ 664 ಹೆಕ್ಟೇರ್, ಕಂದಕದೊಂದಿಗೆ ಬದು ನಿರ್ಮಾಣ 2464 ಹೆಕ್ಟೇರ್ ಪ್ರದೇಶದಲ್ಲಿ ಹಾಗೂ ಎರೆಹುಳು ತೊಟ್ಟಿ ನಿರ್ಮಾಣ 145 ಸಂಖ್ಯೆ ನಿರ್ಮಾಣ ಮಾಡಲಾಗಿರುತ್ತದೆ.

- **ರಸಗೊಬ್ಬರ**: ಮುಂಗಾರು ಹಂಗಾಮಿಗೆ ವಿವಿಧ ರಸಗೊಬ್ಬರಗಳಾದ ಯೂರಿಯಾ, ಡಿ.ಎ.ಪಿ, ಎಂ.ಒ.ಪಿ, ಎಸ್.ಎಸ್.ಪಿ ಹಾಗೂ ಸಂಯುಕ್ತ ರಸಗೊಬ್ಬರಗಳು 45800ಮೆ.ಟನ್‌ಗಳ ಬೇಡಿಕೆಇದ್ದು, ಈಗಾಗಲೇ 40294 ಮೆ.ಟನ್‌ಗಳ ಪ್ರಮಾಣ ಸರಬರಾಜಾಗಿದ್ದು, 32440 ಮೆ.ಟನ್‌ಗಳಷ್ಟು ವಿತರಣೆ ಮಾಡಲಾಗಿದ್ದು, 7854 ಮೆ.ಟನ್

ಗಳಷ್ಟು ದಾಸ್ತಾನಿರುತ್ತದೆ. ಯೂರಿಯಾ ರಸಗೊಬ್ಬರವು ಹಂತ ಹಂತವಾಗಿ ಸರಬರಾಜಾಗುತ್ತಿದ್ದು, ಯಾವುದೇ ರೀತಿಯ ರಸಗೊಬ್ಬರದ ಕೊರತೆ ಇರುವುದಿಲ್ಲ.

- **ಗುಣ ನಿಯಂತ್ರಣ ಕಾರ್ಯಕ್ರಮ:** ಜಿಲ್ಲೆಯಾದ್ಯಂತ ಒಟ್ಟು ರಸಗೊಬ್ಬರ ಮಾರಾಟಗಾರರು 288, ಪೀಡೆನಾಶಕ ಮಾರಾಟಗಾರರು 254 ಮತ್ತು ಬಿತ್ತನೆ ಬೀಜ ಮಾರಾಟಗಾರರು 93 ಸಂಖ್ಯೆ ಇದ್ದು, ಈಗಾಗಲೇ ಪರಿಶೀಲನೆ ಮಾಡಿ ನ್ಯೂನತೆ ಕಂಡುಬಂದಲ್ಲಿ ನೋಟಿಸ್ ನೀಡಲಾಗಿರುತ್ತದೆ.
- **ಪ್ರಧಾನ ಮಂತ್ರಿ ಫಸಲ್ ಬೀಮಾಯೋಜನೆ:** ಈ ಯೋಜನೆಯಡಿ 2018-19ರಲ್ಲಿ ನೋಂದಣಿಯಾದ 19010 ರೈತರಿಗೆ 2019-20 ರಲ್ಲಿ 31.92 ಕೋಟಿ ರೂ.ಗಳಷ್ಟು ರೈತರ ಖಾತೆಗೆ ನೇರವಾಗಿ ಜಮೆ ಮಾಡಲಾಗಿರುತ್ತದೆ. 2019-20 ಹಾಗೂ 2020-21 ನೇ ಸಾಲಿನಲ್ಲಿ 16138 ಹಾಗೂ 17256 ರೈತರು ಫಸಲ್ ಬೀಮಾ ಯೋಜನೆಯಡಿ ನೋಂದಣಿ ಮಾಡಿಸಿರುತ್ತಾರೆ.

ಮೇಲ್ಕಂಡಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸಭೆಯಲ್ಲಿ ಸೂಚಿಸಿದ ಸೂಚನೆಗಳ ಅನ್ವಯ ಕಾರ್ಯನಿರ್ವಹಿಸುವುದಾಗಿ ತಿಳಿಸಿ, ಜಿಲ್ಲಾಧಿಕಾರಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**(ಶ್ರೀ ಮನೋಜ್ ಕುಮಾರ್ ಮೀನಾ. ಭಾ.ಆ.ಸೇ.,)**
**ಸರ್ಕಾರದ ಕಾರ್ಯದರ್ಶಿಗಳು,**
**ವಸತಿ ಇಲಾಖೆ ಹಾಗೂ ಚಿಕ್ಕಬಳ್ಳಾಪುರ**
**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.**

**ಪ್ರತಿಯನ್ನು:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕಳುಹಿಸುತ್ತಾ, ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
5. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ರವಾನಿಸುತ್ತಾ ಸಭಾ ನಡಾವಳಿಗೆ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
6. ಜಿಲ್ಲೆಯ ಎಲ್ಲಾ ಆಯುಕ್ತರು, ನಗರ ಸಭೆ / ಪೌರಾಯುಕ್ತರು ಪುರಸಭೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
7. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ರವಾನಿಸುತ್ತಾ ಸಭಾ ನಡಾವಳಿಗೆ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
8. ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ/02/ಆಶಾ/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 29-09-2020

ಇವರಿಗೆ :

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

ಮಾನ್ಯರೆ,

ವಿಷಯ : ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಬೆಳಗಾವಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಕುರಿತು ವರದಿ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಳಗಾವಿ ಜಿಲ್ಲೆಗೆ ಉಸ್ತುವಾರಿ ಕಾರ್ಯದರ್ಶಿಯಾಗಿ ದಿನಾಂಕ : 25-08-2020 ರಂದು ಭೇಟಿ ನೀಡಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯನ್ನು ಹಾಗೂ ಕೋವಿಡ್ ರೋಗ ನಿಯಂತ್ರಣದ ಕುರಿತು ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯ ಪರಿಶೀಲನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ
ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

## ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮಳೆ ಹಾನಿಗೆ ಸಂಬಂಧಿಸಿದಂತೆ ಹಾಗೂ ಕೋವಿಡ್-19 ಪರಿಶೀಲನಾ ವರದಿ

ಮಾನ್ಯ ಮುಖ್ಯ ಮಂತ್ರಿಗಳು ಬೆಳಗಾವಿ ಜಿಲ್ಲೆಗೆ ಭೇಟಿ ನೀಡಿ ಮಳೆ ಹಾನಿಗೆ ಸಂಬಂಧಿಸಿದಂತೆ ದಿನಾಂಕ: 25-08-2020 ರಂದು ನಡೆಸಿದ ಸಭೆಯಲ್ಲಿ ನಾನು ಪಾಲ್ಗೊಂಡು ನಂತರ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನೆರೆ ಪರಿಸ್ಥಿತಿಯ ಬಗ್ಗೆ ಹಾಗೂ ಕೋವಿಡ್ ಕುರಿತು ಸಭೆಯನ್ನು ನಡೆಸಲಾಯಿತು:

**ಸದರಿ ಸಭೆಯ ವರದಿ ಕೆಳಕಂಡಂತಿದೆ:**

**ನೆರೆ ಪರಿಸ್ಥಿತಿ ಕುರಿತು:**

- 2020ನೇ ಆಗಸ್ಟ್ ತಿಂಗಳಿನಲ್ಲಿ 265 ಮಿಮಿ ಮಳೆಯಾಗಿದ್ದು, ಅಂದರೆ ವಾಡಿಕೆಗಿಂತ 139% ಹೆಚ್ಚಿಗೆ ಮಳೆ ಆಗಿರುತ್ತದೆ. ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಹರಿದು ಬಂದಿರುವ ನೀರಿನ ಪ್ರಮಾಣ ದಿನಾಂಕ: 23-8-2020 ಕ್ಕೆ ಕಲ್ಲೋಳ ಬ್ಯಾರೇಜನಲ್ಲಿ 1.49 ಲಕ್ಷ ಕ್ಯೂಸೆಕ್ಸ್ ಆಗಿರುತ್ತದೆ.

- ಪ್ರಕೃತಿ ವಿಕೋಪ ಘಟನೆಗಳಿಂದ ಗೋಕಾಕ ಮತ್ತು ಚಿಕ್ಕೋಡಿ ತಾಲ್ಲೂಕಿನಲ್ಲಿ ತಲಾ ಒಂದು ಮಾನವ ಹಾನಿ ಪ್ರಕರಣ ದಾಖಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ, ತಲಾ ರೂ.5.00 ಲಕ್ಷಗಳ ಅನುಕಂಪ ಪರಿಹಾರ ಧನವನ್ನು ಮೃತರ ಸಂಬಂಧಿಕರಿಗೆ ವಿತರಿಸಲಾಗಿದೆ. ಜಿಲ್ಲೆಯಲ್ಲಿ 08 ಜಾನುವಾರಗಳು ಮೃತಪಟ್ಟಿರುತ್ತವೆ. ಜಿಲ್ಲೆಯಲ್ಲಿ ಅತಿವೃಷ್ಟಿ/ಪ್ರವಾಹದಿಂದ ಒಟ್ಟು 2066 ಮನೆಗಳು ಹಾನಿಗೊಳಗಾಗಿದ್ದು, ಈ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

- ಜಿಲ್ಲೆಯು ಅತಿವೃಷ್ಟಿ/ಪ್ರವಾಹದಿಂದ ಬಾಧಿತಗೊಂಡಿದ್ದು, ಜನ-ಜಾನುವಾರುಗಳ ರಕ್ಷಣೆಗಾಗಿ ಒಟ್ಟು 19 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದ್ದು, 1407 ಜನರು ಈ ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಪಡೆದಿರುತ್ತಾರೆ ಹಾಗೂ 14 ಗೋಶಾಲೆಗಳನ್ನು ತೆರೆಯಲಾಗಿದ್ದು, ಒಟ್ಟು 723 ಜಾನುವಾರುಗಳು ಆಶ್ರಯ ಪಡೆದಿರುತ್ತವೆ.

- ಕೃಷಿಗೆ ಸಂಬಂಧಿಸಿದಂತೆ, ಜಿಲ್ಲೆಯಲ್ಲಿ ಇದುವರೆಗೆ 6.86ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇ99.8ರಷ್ಟು ಬಿತ್ತನೆಯಾಗಿರುವ ಬಗ್ಗೆ ಗಮನಿಸಲಾಯಿತು. ಅತಿವೃಷ್ಟಿ/ ಪ್ರವಾಹದಿಂದ 62,675 ಹೆಕ್ಟೇರ್ ಪ್ರದೇಶದಲ್ಲಿನ ಕೃಷಿ ಬೆಳೆಗಳು ಹಾನಿಯಾಗಿರುವುದಾಗಿ ಅಂದಾಜಿಸಲಾಗಿದೆ.

- ಅತಿವೃಷ್ಟಿ/ಪ್ರವಾಹದಿಂದ ಬೆಳೆ ಹಾನಿ, ಮನೆಗಳ ಹಾನಿ ಹಾಗೂ ಮೂಲಭೂತ ಸಾರ್ವಜನಿಕ ಆಸ್ತಿಗಳಾದ ರಸ್ತೆ, ಸೇತುವೆಗಳು, ಕುಡಿಯುವ ನೀರಿನ ಸರಬರಾಜು ಯೋಜನೆಗಳು, ಹೆಸ್ಕಾಂ ಇಲಾಖೆಯ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್‌ಗಳು, ತಂತಿಗಳ ಹಾನಿಗೆ ಸಂಬಂಧಿಸಿದಂತೆ ಒಟ್ಟು ರೂ.978.00 ಕೋಟಿ ಹಾನಿಯಾಗಿರುವುದಾಗಿ ಅಂದಾಜಿಸಲಾಗಿದೆ.

- NDRF ಮತ್ತು SDRF ತುಕಡಿಗಳ ಪೂರ್ವ ಸಿದ್ಧತೆಯನ್ನು ಹಾಗೂ ಕೈಗೊಳ್ಳಲಿರುವ ಮುಂಜಾಗ್ರತಾ ಕ್ರಮಗಳ ಬಗ್ಗೆ ಕೂಡಾ ಪರಿಶೀಲಿಸಲಾಯಿತು.

**ಕೋವಿಡ್ ಪರಿಸ್ಥಿತಿಯ ಕುರಿತು ವರದಿ:**

- ಜಿಲ್ಲೆಯಲ್ಲಿ ದಿನಾಂಕ: 25-08-2020 ರವರೆಗೆ ಒಟ್ಟು 82,688 ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 4215 ಆಕ್ಟೀವ್ ಪ್ರಕರಣಗಳಿದ್ದು, 6182 ಪ್ರಕರಣಗಳಲ್ಲಿ ಗುಣಮುಖರಾಗಿರುತ್ತಾರೆ. 163 ಜನರು ನಿಧನರಾಗಿರುತ್ತಾರೆ.

- ದಿನಾಂಕ: 25-08-2020 ರವರೆಗೆ 81,392 ಸ್ವಾಬ್‌ಗಳನ್ನು ಪರೀಕ್ಷೆಗಾಗಿ ಸಂಗ್ರಹಿಸಲಾಗಿದ್ದು, ಇವುಗಳ ಪೈಕಿ 10,560 ಪಾಸಿಟೀವ್ ಆಗಿದ್ದು, 67,658 ನೆಗೆಟೀವ್ ಫಲಿತಾಂಶ ಬಂದಿರುತ್ತದೆ.

(ಎಲ್.ಕೆ.ಅತೀಕ್)
ಸರ್ಕಾರ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ
ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೋವಿಡ್ -19 ರ ಸೋಂಕು ತಡೆಯುವಿಕೆ, ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ಕೈಗೊಂಡಿರುವ ಕ್ರಮಗಳ ಬಗ್ಗೆ ವಿಡಿಯೋ ಸಂವಾದದ ಮೂಲಕ ನಡೆಸಲಾದ ವಿಮರ್ಶನಾ ಸಭೆ ನಡವಳಿಗಳು**

---

-: ಅಧ್ಯಕ್ಷತೆ:-

ಡಾ: ಶಾಲಿನಿ ರಜನೀಶ್, ಭಾ ಆ ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ,
ಬೆಂಗಳೂರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಯವರು

-: ಸ್ಥಳ :-
ಕೆಸ್ವಾನ್, ವಿ.ಸಿ.ಹಾಲ್,
ಜಿಲ್ಲಾಧಿಕಾರಿ ಕಚೇರಿ ಆವರಣ,
ಚಿಕ್ಕಮಗಳೂರು

ದಿನಾಂಕ: 25.09.20
ಮಧ್ಯಾಹ್ನ: 3.00 ಗಂ

ಹಾಜರಿದ್ದವರು:

1. ಜಿಲ್ಲಾಧಿಕಾರಿ, ಚಿಕ್ಕಮಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯ್ತಿ, ಚಿಕ್ಕಮಗಳೂರು .
3. ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
4. ಅಪರ ಜಿಲ್ಲಾಧಿಕಾರಿ, ಚಿಕ್ಕಮಗಳೂರು.
5. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಮಗಳೂರು.
6. ಜಿಲ್ಲಾ ಸರ್ವೇಕ್ಷಣಾಧಿಕಾರಿ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು.

*****

ಕೋವಿಡ್ -19ರ ಸೋಂಕು ತಡೆಯುವಿಕೆ, ನಿಯಂತ್ರಣ ಹಾಗೂ ಚಿಕಿತ್ಸಾ ವ್ಯವಸ್ಥೆಗಳ ಕುರಿತು ಈ ಕೆಳಗಿನಂತೆ ಮಾಹಿತಿಯನ್ನು ಪಡೆದು ಆ ಮೂಲಕ ಸೂಚನೆಗಳನ್ನು ನೀಡಲಾಗಿದೆ.

1) ಜಿಲ್ಲೆಯಲ್ಲಿ ದಿನಾಂಕ: 24-09-2020 ರವರೆಗೆ **1665** ಪ್ರಕರಣಗಳ ಫಲಿತಾಂಶ ನಿರೀಕ್ಷೆಯಲ್ಲಿರುವುದನ್ನು ಗಮನಿಸಲಾಯಿತು. ಇದಕ್ಕಾಗಿ ಕಾರಣ Consumables ಕೊರತೆಯಿಂದ ಕೋವಿಡ್ ಪ್ರಯೋಗಗಳ ಉದ್ದೇಶಕ್ಕೆ Automated RNA Extractor ಗೆ ಬಳಸುವ ರಾಸಾಯನಿಕ ಮತ್ತು ಔಷಧೋಪಕರಣಗಳ ಅವಶ್ಯಕತೆ ಹಾಗೂ ಬೇಡಿಕೆ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡಲು ಸೂಚಿಸಲಾಯಿತು.

2) ಸೋಂಕಿತ ಪ್ರಕರಣಗಳ ಪ್ರಮಾಣವು ಗಣನೀಯವಾಗಿ ಹೆಚ್ಚಾಗುತ್ತಿರುವುದನ್ನು ಗಮನಿಸುತ್ತಾ, ಚಿಕಿತ್ಸಾ ಸಂಬಂಧವಾಗಿ ಜಿಲ್ಲಾ ಆಸ್ಪತ್ರೆಯಲ್ಲಿ ಒಟ್ಟು 28 ವೆಂಟಿಲೇಟರ್ ಗಳು ಸರಬರಾಜಾಗಿದ್ದು, ಆ ಪೈಕಿ 18 ವೆಂಟಿಲೇಟರ್ ಗಳನ್ನು ಪರಿಣಾಮಕಾರಿ ಚಿಕಿತ್ಸೆಗಾಗಿ ಅವಶ್ಯಕತೆ ಇರುವ ರೋಗಿಗಳಿಗೆ ಬಳಸುತ್ತಿರುವುದು ಸರಿಯಷ್ಟೆ. **ಉಳಿದ 10 ವೆಂಟಿಲೇಟರ್ ಗಳನ್ನು ತ್ವರಿತವಾಗಿ ಅಳವಡಿಸುವ ಕ್ರಮವಹಿಸಲು ಸೂಚಿಸಲಾಯಿತು.** ಮುಂದುವರೆದು, ಪರಿಣಾಮಕಾರಿ ಚಿಕಿತ್ಸೆಗಾಗಿ ಒಟ್ಟು ರೂ.**365.64** ಲಕ್ಷದ ವಿವಿಧ ವೈದ್ಯಕೀಯ ಸಾಧನ ಹಾಗೂ ಸೌಲಭ್ಯಗಳ ಅನುಷ್ಠಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದನ್ನು ಗಮನಿಸಲಾಗಿದೆ.

3) ಜಿಲ್ಲಾ ಕೇಂದ್ರದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಅರವಳಿಕೆ ತಜ್ಞರ ಕೊರತೆ ಇದ್ದು, ಹೆಚ್ಚುವರಿ 4 ಅಥವಾ 5 ಅರವಳಿಕೆ ತಜ್ಞರ ಅವಶ್ಯಕತೆ ಇರುವುದನ್ನು ಜಿಲ್ಲಾಧಿಕಾರಿಗಳು ತಿಳಿಸಿದ್ದು, ಈ ಬಗ್ಗೆ ಸ್ಥಳೀಯ ಖಾಸಗಿ ತಜ್ಞರನ್ನು ಗಂಟೆಗಳ ಆಧಾರದ (hourly basis) ಮೇಲೆ ಹೊರಗುತ್ತಿಗೆ ಮೇಲೆ ತೆಗೆದುಕೊಳ್ಳಲು ಸೂಚಿಸಲಾಯಿತು. ಅಲ್ಲದೆ, ವೈದ್ಯಕೀಯ ಶಿಕ್ಷಣ ಇಲಾಖೆಯಿಂದ PG Interns ಗಳಲ್ಲಿ ಬದಲಿ ವ್ಯವಸ್ಥೆಯ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಸೂಚಿಸಲಾಯಿತು.

4) ಕೋವಿಡ್ ಹಾಗೂ ಇತರೆ ಚಿಕಿತ್ಸೆ ಸಂಬಂಧವಾಗಿ ಗ್ರಾಮಾಂತರದಿಂದ ಜಿಲ್ಲಾ ಮಟ್ಟದವರೆಗೆ ರೋಗಿಗಳು ಬರುವುದು ಕಷ್ಟಸಾಧ್ಯವಾಗುವ ಕಾರಣ ತಾಲ್ಲೂಕು ಆಸ್ಪತ್ರೆಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಅದರಲ್ಲೂ ಕಡೂರು, ತರೀಕೆರೆ ಭಾಗದಲ್ಲಿ ಈ ಆರೋಗ್ಯ ಕೇಂದ್ರಗಳನ್ನು ಉನ್ನತೀಕರಿಸುವ ಬಗ್ಗೆ ಪರಿಶೀಲಿಸಿ, ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ರವರಿಗೆ ಸೂಚಿಸಲಾಯಿತು.

5) ಬೂತ್ ಮಟ್ಟದ ಸಮಿತಿಗಳನ್ನು ಕೋವಿಡ್ ಪ್ರಕರಣಗಳ ಸಂಪರ್ಕ ಮಾಹಿತಿ, ಗೃಹ ಕ್ವಾರಂಟೈನ್ ನಲ್ಲಿರುವವರನ್ನು ಸಂಪರ್ಕಿಸಿ ಆರೋಗ್ಯ ಸ್ಥಿತಿ ವಿಚಾರಿಸುವ ಕ್ರಮವಹಿಸುವ ಮೂಲಕ ಸೋಂಕಿತರಲ್ಲಿ ಭರವಸೆ ಮೂಡಿಸುವ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾಪಂಚಾಯಿತಿ ರವರಿಗೆ ಸೂಚಿಸಲಾಯಿತು.

6) ಆತ್ಮನಿರ್ಭರ ಯೋಜನೆಯನ್ನು ಫಲಕಾರಿ ರೀತಿಯಲ್ಲಿ ವಿಸ್ತಾರಗೊಳಿಸಿ ಅನುಷ್ಠಾನಗೊಳಿಸುವುದು ಅವಶ್ಯವಿರುವುದರಿಂದ ಈ ಯೋಜನೆ ಅನುಷ್ಠಾನ ಸಂಬಂಧವಾಗಿ ಸಂಘ ಸಂಸ್ಥೆಗಳನ್ನು ಮತ್ತು ಇತರೆ ಖಾಸಗಿ ಸಂಸ್ಥೆಗಳನ್ನು ಬಳಸುವುದಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

7) ಕೋವಿಡ್ ನಿಯಂತ್ರಣ ಸಂಬಂಧದಲ್ಲಿ ಮಾಸ್ಕ್ ಧರಿಸುವಿಕೆ ಮತ್ತು ಸಾಮಾಜಿಕ ಅಂತರ ಕಾಪಾಡುವ ವಿಚಾರದಲ್ಲಿ ಸಾರ್ವಜನಿಕವಾಗಿ ಹೆಚ್ಚಿನ ಮಾಹಿತಿಯನ್ನು ಮತ್ತು ಪ್ರಚಾರವನ್ನು ನೀಡುವ ನಿಟ್ಟಿನಲ್ಲಿ ಗೋಡೆಬರಹ ಅಳವಡಿಸಿಕೊಳ್ಳುವುದು ಸೂಕ್ತವೆಂದು ಸೂಚಿಸಲಾಯಿತು.

8) ಚಿಕ್ಕಮಗಳೂರು ಜಿಲ್ಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವುದರಿಂದ ಅಂತಹ ಸ್ಥಳಗಳಲ್ಲಿ ಕೋವಿಡ್ ಪ್ರಾಥಮಿಕ ಪರೀಕ್ಷೆಗೆ ಸಂಬಂಧಿಸಿದಂತೆ ಸಂಚಾರಿ ಪರೀಕ್ಷಾ ತಂಡವನ್ನು ನಿಯೋಜನೆಗೊಳಿಸಿ Tourism, Industry workers ಗಳ (Random) ಪ್ರಕರಣಗಳನ್ನು ತಪಾಸಣೆ ನಡೆಸುವುದು ಸೂಕ್ತವೆಂದು ಸೂಚಿಸಲಾಯಿತು.

9) ಆಯುಷ್ ಇಲಾಖೆಯ ವೈದ್ಯ ಪದ್ಧತಿಯ ಬಗ್ಗೆ ಮತ್ತು ಕೋವಿಡ್ ಸಂಬಂಧದ ನಿಯಂತ್ರಣ ಹಾಗೂ ಮುಂಜಾಗ್ರತಾ ಔಷಧೋಪಚಾರಗಳ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿ ಪರಿಣಾಮಕಾರಿಯಾಗಿ ಬಳಸುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ರವರು ತಿಳಿಸಿದರು.

**10)** ಕೋವಿಡ್ ಸೋಂಕಿತ ಪಾಸಿಟಿವ್ ಪ್ರಕರಣಗಳ ಪೈಕಿ 112 ಸೋಂಕಿತರು ಮೃತಪಟ್ಟಿದ್ದು, ಜಿಲ್ಲೆಯಾದ್ಯಂತ ಒಟ್ಟು **12554** ವಿವಿಧ ದುರ್ಬಲ ವರ್ಗ ವ್ಯಾಪ್ತಿಗೆ ಬರುವುದಾಗಿ ಗುರುತಿಸಿರುವುದನ್ನು ಗಮನಿಸಲಾಗಿದೆ. ಆದರೆ ಜಿಲ್ಲೆಯ ಒಟ್ಟಾರೆ ಜನಸಂಖ್ಯೆಗೆ ಪರಿಶೀಲಿಸಿದಾಗ 55 ವರ್ಷ ಮೇಲ್ಪಟ್ಟ ಜನರ ಪಟ್ಟಿ ಮಾಡಿ ಬೂತ್ ಮಟ್ಟದ ಸಮಿತಿಗಳು ಹಾಗೂ ಸ್ಥಳೀಯ ಆರೋಗ್ಯ ಇಲಾಖಾ ಕಾರ್ಯಕರ್ತರು ಸೂಕ್ಷ್ಮವಾಗಿ ಸಮೀಕ್ಷೆ ನಡೆಸಿ ಆರೋಗ್ಯ ದೃಷ್ಟಿಯಿಂದ

ಬೇಕಾದ ಔಷಧ/ಉಪಚಾರ ಸಮಯಕ್ಕೆ ಸರಿಯಾಗಿ ನೀಡಿದಲ್ಲಿ ಕೋವಿಡ್ ಸಂಬಂಧದಲ್ಲಿ ಮೃತರಾಗುವ ಸಂಖ್ಯೆಗಳನ್ನು ಕಡಿಮೆಗೊಳಿಸುವ ಸಾಧ್ಯತೆಗಳಿವೆ ಎಂಬುದನ್ನು ತಿಳಿಸಲಾಯಿತು.

11) ಕಳೆದ ಸಾಲಿನ ಅತಿವೃಷ್ಟಿಯಿಂದ ಮನೆಗಳನ್ನು ಪುನರ್ ನಿರ್ಮಾಣ ಮಾಡಿಕೊಳ್ಳುವ ವಿಚಾರದಲ್ಲಿ ನಿವೇಶನ ನೀಡಿರುವ ಪ್ರಕರಣಗಳಲ್ಲಿ ಮನೆಗಳ ನಿರ್ಮಾಣ ಪ್ರಗತಿ ಕುಂಠಿತವಾಗಿರುವುದರಿಂದ, ಈ ಬಗ್ಗೆ ಮನೆಗಳು ತ್ವರಿತವಾಗಿ ನಿರ್ಮಾಣವಾಗುವಂತೆ ಸ್ಥಳೀಯವಾಗಿ ಫಲಾನುಭವಿಗಳೊಂದಿಗೆ ಮತ್ತು KRIDL ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ಸ್ಥಳೀಯವಾಗಿ ಖಾಸಗಿ ಗುತ್ತಿಗೆದಾರರನ್ನು ಒದಗಿಸಿ, ಮನೆಗಳ ನಿರ್ಮಾಣ ಪ್ರಗತಿ ಚುರುಕುಗೊಳ್ಳುವಂತೆ ಸೂಚಿಸಲಾಯಿತು.

12) ಪೊಲೀಸ್ ಇಲಾಖೆಯ ವತಿಯಿಂದ ಕೋವಿಡ್ ನಿಯಂತ್ರಣ ಹಾಗೂ ಮುಂಜಾಗ್ರತೆ ಸಂಬಂಧವಾಗಿ ರಕ್ಷಣಾತ್ಮಕ ಕ್ರಮ ವಹಿಸಲಾಗುತ್ತಿದ್ದು, ಆದಾಗ್ಯೂ Violators ಮೇಲೆ ಹೆಚ್ಚಿನ ದಂಡಗಳನ್ನು ವಿಧಿಸಲು ಹಾಗೂ ಕೋವಿಡ್-19 ಹರಡುವಿಕೆಯಿಂದ ಜನರ ರಕ್ಷಣೆ ಮಾಡಲು ಪೊಲೀಸ್ ಅಧೀಕ್ಷಕರಿಗೆ ಸೂಚಿಸಲಾಯಿತು.

ಕೊನೆಯಲ್ಲಿ ಎಲ್ಲರಿಗೂ ಶುಭ ಕೋರುತ್ತಾ, ಸಭೆಯನ್ನುಮುಕ್ತಾಯಗೊಳಿಸಲಾಯಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ ಹಾಗೂ
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ದಿನಾಂಕ: 25-09-2020

ನಂ:ಕೋವಿಡ್ -19 (VC) 2020

ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1) ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
3) ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು
4) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಮಗಳೂರು
5) ಜಿಲ್ಲಾ ಸರ್ಜನ್, ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು
6) ಜಿಲ್ಲಾ ಸರ್ವೇಕ್ಷಣಾಧಿಕಾರಿ, ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು

**ತುಷಾರ್ ಗಿರಿ ನಾಥ್**, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಸರ್ಕಾರದ ಸಚಿವಾಲಯ
ಸಹಕಾರ ಇಲಾಖೆ
Karnataka Government Secretariat
Co-operation Department

ಸಂಖ್ಯೆ: ಸಇ/ಸಪ್ರಕಾ/13/2020 ದಿನಾಂಕ: 21-09-2020

ರವರಿಗೆ,
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮಗೆ ಹಂಚಿಕೆ ಮಾಡಲಾದ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವ ಕುರಿತು.

ಉಲ್ಲೇಖ: 1. ಸಂಖ್ಯೆ: ಸಿಆಸುಇ/02/ಇಸಪ/2019, ದಿನಾಂಕ: 20-11-2019.
2. ಸಂಖ್ಯೆ: ಮುಕಾ/295/2020, ದಿನಾಂಕ: 07-04-2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರಲ್ಲಿ ನನ್ನನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಬೆಂಗಳೂರು ನಗರ ಜಿಲ್ಲೆಗೆ ನೇಮಿಸಲಾಗಿರುತ್ತದೆ. ಉಲ್ಲೇಖ(2) ಸೂಚನೆಯಂತೆ ಸದರಿ ಜಿಲ್ಲೆಯ ಪ್ರದೇಶಗಳಿಗೆ ಭೇಟಿ ನೀಡಿ ಹಾಗೂ ಸಭೆ ನಡೆಸಿ ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿರುವ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಘನ ಅವಗಾಹನೆಗೆ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ತುಷಾರ್ ಗಿರಿ ನಾಥ್)

**ಪ್ರತಿಯನ್ನು:**

1. ಮಾನ್ಯ ಮುಖ್ಯಮಂತ್ರಿಗಳ ಅವರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ(ವಿಪತ್ತು ನಿರ್ವಹಣೆ, ಭೂಮಿ ಮತ್ತು ಯುಪಿಒಆರ್), ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಸಿಆಸುಇಲಾಖೆ(ಆಸು-ತರಬೇತಿ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಬಹುಮಹಡಿ ಕಟ್ಟಡ, 3ನೇ ಹಂತ, 6ನೇ ಮಹಡಿ, ಬೆಂಗಳೂರು-560 001
M.S. Building, 3rd Stage, 6th Floor, Bengaluru-560 001, Karnataka, India
Telephone No: 080-22251297, 22032512, Fax: 080-22253721 E-mail: prs-coop@karnataka.gov.in

**ದಿನಾಂಕ 18-09-2020 ರಂದು ಮುಖ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಭಾ.ಆ.ಸೇ., ರವರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 10-00 ಗಂಟೆಗೆ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

| | |
|---|---|
| 1 | ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 2 | ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 3 | ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 4 | ವಿಶೇಷ ಜಿಲ್ಲಾಧಿಕಾರಿಗಳು-1, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. |
| 5 | ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪವಿಭಾಗ, ಬೆಂಗಳೂರು |
| 6 | ಕಛೇರಿ ಸಹಾಯಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 7 | ಸಹಾಯಕ ನಿಯಂತ್ರಕರು(ಲೆಕ್ಕಪತ್ರ), ಜಿಲ್ಲಾಧಿಕಾರಿಗಳ ಕಚೇರಿ, ಬೆಂಗಳೂರು. |
| 8 | ತಹಶೀಲ್ದಾರ್, ಪೂರ್ವ, ಯಲಹಂಕ ಮತ್ತು ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ |
| 9 | ತಹಶೀಲ್ದಾರ್, ಮುಜರಾಯಿ ಇಲಾಖೆ, ಬೆಂಗಳೂರು |
| 10 | ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, |
| 11 | ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು ನಗರ |
| 12 | ಜಿಲ್ಲಾ ಆಯುಷ್ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ |
| 13 | ಜಿಲ್ಲಾ ಅಧಿಕಾರಿ, ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ |
| 14 | ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು |
| 15 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ಬೆಂಗಳೂರು ನಗರ |
| 16 | ಭೂ ದಾಖಲೆಗಳ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ |
| 17 | ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ |
| 18 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು ನಗರ |
| 19 | ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು |
| 20 | ಉಪ ನಿರ್ದೇಶಕರು, ಕೈಗಾರಿಕೆ ಇಲಾಖೆ, ಬೆಂಗಳೂರು |
| 21 | ರೇಷ್ಮೆ ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು ನಗರ |
| 22 | ಉಪ ನಿರ್ದೇಶಕರು, ಕೈ ಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ನಗರ |
| 23 | ಉಪ ನಿರ್ದೇಶಕರು, ಉತ್ತರ & ದಕ್ಷಿಣ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ನಗರ |
| 24 | ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಬಿಬಿಎಂಪಿ, ಬೆಂಗಳೂರು |
| 25 | ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರು ನಗರ |
| 26 | ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು ನಗರ ಜಿಲ್ಲೆ. |
| 27 | ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ |
| 28 | ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು |
| 29 | ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು |
| 30 | ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಆನೇಕಲ್ |
| 31 | ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಸಭೆ, ಹೆಬ್ಬಗೋಡಿ |
| 32 | ಕಿರಿಯ ಅಭಿಯಂತರರು, ನಗರಸಭೆ, ಹೆಬ್ಬಗೋಡಿ |

| | |
|---|---|
| 33 | ಯೋಜನಾ ನಿರ್ದೇಶಕರು, ಡಿಯುಡಿಸಿ, ಬೆಂಗಳೂರು ನಗರ |
| 34 | ಪೌರಾಯುಕ್ತರು, ನಗರಸಭೆ, ಹೆಬ್ಬಗೋಡಿ |
| 35 | ಮುಖ್ಯಾಧಿಕಾರಿ, ಪುರಸಭೆ, ಅತ್ತಿಬೆಲೆ |
| 36 | ಮುಖ್ಯಾಧಿಕಾರಿ, ಪುರಸಭೆ, ಚಂದಾಪುರ |
| 37 | ಮುಖ್ಯಾಧಿಕಾರಿ, ಪುರಸಭೆ, ಮಾದನಾಯಕನಹಳ್ಳಿ |
| 38 | ಮುಖ್ಯಾಧಿಕಾರಿ, ಪುರಸಭೆ, ಆನೇಕಲ್ |
| 39 | ಎನ್ವಿರಾಲ್‌ಮೆಂಟ್ ಇಂಜಿನೀಯರ್, ಪುರಸಭೆ ಚಂದಾಪುರ ಮತ್ತು ಆನೇಕಲ್ |
| 40 | ಕಿರಿಯ ಇಂಜಿನೀಯರ್(ಎಲೆಕ್ಟ್ರಿಕಲ್) ಪುರಸಭೆ, ಅತ್ತಿಬೆಲೆ |
| 41 | ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು |
| 42 | ಕಿರಿಯ ಇಂಜಿನೀಯರ್, ಪುರಸಭೆ, ಆನೇಕಲ್ |
| 43 | ತಹಶೀಲ್ದಾರ್ ಗ್ರೇಡ್-2, ಉತ್ತರ ತಾಲ್ಲೂಕು ಬೆಂಗಳೂರು ನಗರ ಜಿಲ್ಲೆ |
| 44 | ತಹಶೀಲ್ದಾರ್-2, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ |
| 45 | ಶಿರಸ್ತೇದಾರ್,ಎಸ್.ಎಸ್.ವೈ, ಬೆಂಗಳೂರು ಪೂರ್ವ ತಾಲ್ಲೂಕು |
| 46 | ಶಿರಸ್ತೇದಾರ್, ದಕ್ಷಿಣ ತಾಲ್ಲೂಕು ಕಛೇರಿ, ಬೆಂಗಳೂರು ನಗರ ಜಿಲ್ಲೆ |
| 47 | ಶಿರಸ್ತೇದಾರ್, ಅನೇಕಲ್ ತಾಲ್ಲೂಕು ಕಛೇರಿ, ಬೆಂಗಳೂರು ನಗರ ಜಿಲ್ಲೆ |
| 48 | ಜಿಲ್ಲಾಧಿಕಾರಿಗಳ ಕಛೇರಿಯ ಶಿರಸ್ತೇದಾರರು |

*****

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಿದರು.

1. **ಕೃಷಿ ಇಲಾಖೆ:**

ಬೆಂಗಳೂರು ನಗರ ಜಿಲ್ಲೆಯಲ್ಲಿ ಜೂನ್ ತಿಂಗಳಿನಿಂದ ಸೆಪ್ಟೆಂಬರ್ 15ನೇ ತಾರೀಖಿನವರೆಗೆ ವಾಡಿಕೆ ಮಳೆಗಿಂತ ಹೆಚ್ಚಿಗೆ ಮಳೆ ಬಂದಿದ್ದು, ರೈತರಿಗೆ ವಿತರಿಸಲು ರಸಗೊಬ್ಬರದ ಮತ್ತು ಬಿತ್ತನೆ ಬೀಜಗಳ ಕೊರತೆ ಇಲ್ಲವೆಂದು, ಬೆಳೆ ಸಮೀಕ್ಷೆಗಾಗಿ ಒಟ್ಟು 607 ಜನರನ್ನು ನಿಯೋಜಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ತಾಲ್ಲೂಕುವಾರು ಆಗಿರುವ ಪ್ರಗತಿಯ ಬಗ್ಗೆ ಸಭೆಗೆ ಜಂಟಿ ನಿರ್ದೇಶಕರು ವಿವರಿಸಿದರು.

ಬೆಳೆ ಸಮೀಕ್ಷೆಯ ಸರ್ವೆ ಕಾರ್ಯವು ಶೇಕಡ 22 ರಷ್ಟು ಆಗಿರುವುದನ್ನು ಗಮನಿಸಿದ ಸಭೆಯು, ಇನ್ನು ಒಂದು ವಾರದೊಳಗೆ ಎಲ್ಲಾ ತಾಲ್ಲೂಕುಗಳ ಬೆಳೆ ಸಮೀಕ್ಷೆಯ ಸರ್ವೇ ಕಾರ್ಯವನ್ನು ಅಂದರೆ ದಿನಾಂಕ:25/09/2020ರೊಳಗಾಗಿ ಪೂರ್ಣಗೊಳಿಸುವಂತೆ ನಿರ್ದೇಶಿಸಲಾಯಿತು. ಈ ಬಗ್ಗೆ ಜಿಲ್ಲಾಧಿಕಾರಿಗಳು ಸಭೆಯ ಅಧ್ಯಕ್ಷರಿಗೆ ದಿನಾಂಕ:25/9/2020 ರಂದು ಅದುವರೆಗೂ ಆಗಿರುವ ಪ್ರಗತಿಯ ಬಗ್ಗೆ ತಿಳಿಸುವಂತೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಎಲ್ಲಾ ತಾಲ್ಲೂಕುಗಳ ತಹಶೀಲ್ದಾರ್‌ಗಳು)

2. <u>ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಇಲಾಖೆ:</u>

ಉಪ ನಿರ್ದೇಶಕರು ಸಭೆಯಲ್ಲಿ ಮಾತನಾಡುತ್ತಾ, ನಗರದಲ್ಲಿ ಪ್ರಸ್ತುತ ಒಟ್ಟು 153861 ದನಕರುಗಳು, 11168 ಎಮ್ಮೆಗಳು 82873 ಕುರಿಗಳು ಮತ್ತು 62464 ಮೇಕೆಗಳಿದ್ದು, ಒಟ್ಟು 216526 ಟನ್ ಮೇವಿನ ದಾಸ್ತಾನು ಇದ್ದು, ಇದುವರೆಗೂ 7701 ಟನ್ ಮೇವು ಮಾತ್ರ ಖರ್ಚಾಗಿದ್ದು, ಇನ್ನು 208824.84 ಟನ್ ಮೇವು ದಾಸ್ತಾನು ಮುಂದಿನ 27 ವಾರಗಳಿಗೆ ಯಾವುದೇ ರೀತಿಯಲ್ಲೂ ಮೇವಿನ ಕೊರತೆ ಇಲ್ಲವೆಂದು, 2020–21ನೇ ಸಾಲಿನಲ್ಲಿ ಮೇವಿನ ಬೀಜಗಳ 4999 ಮಿನಿಕಿಟ್‌ಗಳನ್ನು ವಿತರಣೆ ಹಾಗೂ ಪಶುಗಣತಿಯ ಕುರಿತು ಅವರ ಇಲಾಖಾ ವೆಬ್‌ಸೈಟ್‌ನಲ್ಲಿ ದಾಖಲು ಮಾಡಿರುವ ಬಗ್ಗೆ ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

3. <u>ಘನ ತ್ಯಾಜ್ಯ ನಿರ್ವಹಣೆ ಘಟಕಗಳ ಸ್ಥಾಪನೆಗಾಗಿ ಜಮೀನು ಕಾಯ್ದಿರಿಸಲು ಪ್ರಸ್ತಾವನೆಗಳು ಬಾಕಿ ಇರುವ ಬಗ್ಗೆ</u>

ಸಭೆಯಲ್ಲಿ ಹಾಜರಿದ್ದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ನಗರ ಜಿಲ್ಲೆ ಇವರು ಮಾತನಾಡುತ್ತಾ ಒಟ್ಟು 33 ಜಾಗಗಳನ್ನು ಗುರುತಿಸಿದ್ದು, ಇದರಲ್ಲಿ ಶೇಕಡ 90ರಷ್ಟು ಜಾಗವನ್ನು ಕಂದಾಯ ಇಲಾಖೆಯು ನೀಡಿದ್ದು, ಯಲಹಂಕ ತಾಲ್ಲೂಕಿನಲ್ಲಿ ಕೋರಿದ್ದ ಬಿಳಿಜಾಜಿ ಸ.ನಂ.27ರಲ್ಲಿ ಜಮೀನು ಲಭ್ಯವಿಲ್ಲದೆ ಇರುವುದರಿಂದ ಸ.ನಂ.28 ರಲ್ಲಿ ಜಾಗ ಲಭ್ಯವಿದ್ದು, ಈ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವುದಾಗಿ ತಹಶೀಲ್ದಾರ್ ಸಭೆಗೆ ತಿಳಿಸಿದರು. ಅದೇ ರೀತಿ ಹೆಸರುಘಟ್ಟದಲ್ಲಿ ಎರಡು ಪಂಚಾಯ್ತಿಗಳಿಂದ 2 ಎಕರೆ ಜಮೀನನ್ನು ನೀಡುವುದಾಗಿಯೂ, ಕೆ.ಜಿ. ಅಗ್ರಹಾರದಲ್ಲಿರುವ ಜಮೀನು ಈಗಾಗಲೇ ವಕ್ಫ್ ಬೋರ್ಡ್ ಹೆಸರಿನಲ್ಲಿರುವುದರಿಂದ ಈ ಜಾಗವನ್ನು ನೀಡಲು ಅವಕಾಶ ಇಲ್ಲದೆ ಇರುವುದನ್ನು ಸಭೆಯ ಗಮನಕ್ಕೆ ತಂದರು. ಮುಂದುವರೆದು ಉಪವಿಭಾಗಾಧಿಕಾರಿಗಳು, ದಕ್ಷಿಣ ಉಪವಿಭಾಗ ಇಲ್ಲಿ 2 ಪ್ರಸ್ತಾವನೆಗಳು ಬಾಕಿ ಇದ್ದು, ಉತ್ತರ ಉಪವಿಭಾಗದಲ್ಲಿ ಕಡುಬಗೆರೆಯಲ್ಲಿ ಕೋರಿದ ಜಾಗವು ಲಭ್ಯವಿಲ್ಲದೆ ಇರುವುದರಿಂದ ಗಿಡ್ಡೇನಹಳ್ಳಿಯಲ್ಲಿ ಇದರ ಬದಲು ಜಮೀನನ್ನು ನೀಡುವುದಾಗಿ ಉಪವಿಭಾಗಾಧಿಕಾರಿಗಳು, ಉತ್ತರ ಉಪವಿಭಾಗ ಇವರು ಸಭೆಗೆ ತಿಳಿಸಿದರು. ಉಳಿದ ಪ್ರಸ್ತಾವನೆಗಳನ್ನು ಇನ್ನೆರಡು ದಿನಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಸಲ್ಲಿಸುವಂತೆ ಎರಡು ವಿಭಾಗಗಳ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಉತ್ತರ & ದಕ್ಷಿಣ ಉಪವಿಭಾಗ )

4. <u>ಸಮಾಜ ಕಲ್ಯಾಣ ಇಲಾಖೆಗೆ ಅಗತ್ಯವಿರುವ ಜಾಗದ ಬಗ್ಗೆ</u>

ಈ ಹಿಂದೆ ಕೋರಲಾಗಿದ್ದ ಹೊಮ್ಮದೇವನಹಳ್ಳಿಯ ಜಾಗವನ್ನು ಕಂದಾಯ ಇಲಾಖೆಯು ಮಂಜೂರು ಮಾಡಿರುವ ಬಗ್ಗೆ ಜಂಟಿ ನಿರ್ದೇಶಕರು ಸಭೆಗೆ ತಿಳಿಸುತ್ತಾ, ಈಗಾಗಲೇ ಸಮಾಜ ಕಲ್ಯಾಣ ಇಲಾಖೆಗೆ ನೀಡಲಾಗಿರುವ ಬಿಎಂ ಕಾವಲ್ ಸ.ನಂ.132 ರಲ್ಲಿನ ಜಾಗದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಆರಂಭಿಸಲು ಹೋದಾಗ ಅಲ್ಲಿಯ ಸ್ಥಳೀಯ ಜನರು ಆ ಜಾಗ ಅವರಿಗೆ ಸೇರಿದ್ದೆಂದು ತಕರಾರು ಮಾಡಿದ್ದು, ಅದೇ ರೀತಿ ಯಲಚೇನಹಳ್ಳಿಯಲ್ಲೂ ಸಹ ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಮಂಜೂರು ಮಾಡಿದ್ದ ಜಾಗದಲ್ಲಿ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸುವ ಸಮಯದಲ್ಲಿ ಅಲ್ಲಿಯ ಬಿಲ್ಡರ್‌ನವರು ಸರ್ಕಾರಿ ರಸ್ತೆಯ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಿಕೊಂಡು, ಅವರ ಖಾಸಗಿ ಸ್ವತ್ತನ್ನು ಓಡಾಟಕ್ಕಾಗಿ ಬಿಟ್ಟುಕೊಂಡಿದ್ದು, ಇದರಿಂದ ಹಾಸ್ಟೆಲ್ ನಿರ್ಮಾಣ ಕಾರ್ಯಕ್ಕಾಗಿ ರಸ್ತೆಯಿಲ್ಲದೆ ಸ್ಥಗಿತಗೊಳಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

ಈ ಬಗ್ಗೆ ಕೂಡಲೇ ತಹಶೀಲ್ದಾರ್‌ಗಳು ಮತ್ತು ಉಪವಿಭಾಗಾಧಿಕಾರಿಗಳು ಎರಡು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಸರ್ಕಾರಿ ಜಾಗವನ್ನು ಅತಿಕ್ರಮಿಸಿಕೊಂಡಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳುವಂತೆ ಸೂಚನೆಯನ್ನು ನೀಡಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಉತ್ತರ/ದಕ್ಷಿಣ ಹಾಗೂ ಸಂಬಂಧಪಟ್ಟ ತಹಶೀಲ್ದಾರ್‌ಗಳು)

5. <u>ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:</u>

ಇದುವರೆಗೂ ಜಿಲ್ಲಾಡಳಿತವು 14 ಜಾಗ/ನಿವೇಶನಗಳನ್ನು ಹಾಸ್ಟೆಲ್‌ಗಾಗಿ ನೀಡಿದ್ದು, ಇನ್ನು ಅಗತ್ಯವಿರುವ 4 ಜಾಗವನ್ನು ಉಲ್ಲಾಳದಲ್ಲಿ ನೀಡುವಂತೆ ಕೋರಿದ್ದು, ಅಲ್ಲಿ ಜಾಗ ಲಭ್ಯವಿಲ್ಲದೆ ಇರುವುದರಿಂದ ಕೊಡಿಗೆಹಳ್ಳಿಯಲ್ಲಿ ಒಂದೇ ಕಡೆ 4 ಹಾಸ್ಟೆಲ್‌ಗೆ ಬೇಕಾದಷ್ಟು ಜಾಗವನ್ನು ಗುರುತಿಸಲಾಗಿದ್ದು, ಒಂದು ವಾರದೊಳಗಾಗಿ ಜಾಗವನ್ನು ಕಾಯ್ದಿರಿಸುವ ಬಗ್ಗೆ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುವುದೆಂದು ಉಪವಿಭಾಗಾಧಿಕಾರಿಗಳು ಉತ್ತರ ಉಪವಿಭಾಗರವರು ಸಭೆಯ ಗಮನಕ್ಕೆ ತಂದರು. ಒಂದು ವಾರದೊಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ತಿಳಿಸಲಾಯಿತು.

ಈಗಾಗಲೇ ರಾಮೋಹಳ್ಳಿಯಲ್ಲಿ ನೀಡಲಾದ ಜಾಗದಲ್ಲಿ ಕಟ್ಟಡ ಕಟ್ಟಲು ಸ್ಥಳೀಯರು ತೊಂದರೆ ನೀಡುತ್ತಿರುವ ಬಗ್ಗೆ ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪವಿಭಾಗ, ಹಾಗೂ ತಹಶೀಲ್ದಾರ್, ಉತ್ತರ ಮತ್ತು ದಕ್ಷಿಣ ತಾಲ್ಲೂಕು, ಬೆಂಗಳೂರು)

6. <u>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:</u>

ಬೆಂಗಳೂರು ನಗರ ಜಿಲ್ಲೆಯಲ್ಲಿ ನಿವೇಶನ ಲಭ್ಯವಿಲ್ಲದ ಅಂಗನವಾಡಿ (ಗ್ರಾಮೀಣ ಪ್ರದೇಶ ವ್ಯಾಪ್ತಿ) ಕೇಂದ್ರಗಳು 131 ಹಾಗೂ ನಗರ ಪ್ರದೇಶದಲ್ಲಿ ನಿವೇಶನ ಲಭ್ಯವಿಲ್ಲದಿರುವ ಅಂಗನವಾಡಿ ಕೇಂದ್ರಗಳು 1223 ಇದ್ದು, ಒಟ್ಟು 1354 ಅಂಗನವಾಡಿ ಕೇಂದ್ರಗಳಿಗೆ ಜಾಗಗಳನ್ನು ನೀಡುವಂತೆ ಸಭೆಯನ್ನು ಕೋರಿದರು.

ಅವರ ಕೋರಿಕೆಯನ್ನು ಗಮನಿಸಿದ ಸಭೆಯು, ಬಿಬಿಎಂಪಿ ವ್ಯಾಪ್ತಿ ಸಮುದಾಯ ಭವನಗಳು ಹಾಗೂ ಸರ್ಕಾರಿ ಶಾಲೆಗಳಲ್ಲಿ ನಡೆಸುತ್ತಿರುವ ಅಂಗನವಾಡಿ ಕೇಂದ್ರಗಳನ್ನು ಹೊರತು ಪಡಿಸಿ, ಉಳಿದಂತೆ ಬಾಡಿಗೆಯಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಸ್ಥಳಾವಕಾಶ ಕಲ್ಪಿಸುವ ನಿಟ್ಟಿನಲ್ಲಿ, ಪ್ರಸ್ತುತ ಈಗಾಗಲೇ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗಣನೀಯವಾಗಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಅಂತಹ ಶಾಲೆಗಳನ್ನು ಆಯ್ದುಕೊಂಡು, ಅಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸುವಂತೆಯೂ, ಯಾವ ಗ್ರಾಮಗಳಲ್ಲಿ ಶಾಲೆ ಇರುವುದಿಲ್ಲವೋ ಅಂತಹ ಕಡೆ ಮಾತ್ರ ಜಾಗವನ್ನು ನೀಡುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಮತ್ತು ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರ್‌ಗಳು)

7. <u>ಸ್ಥಳೀಯ ಸಂಸ್ಥೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಟ್ಯಾಂಕರ್‌ಗಳನ್ನು ಬಳಸುತ್ತಿರುವ ಬಗ್ಗೆ</u>

ಯೋಜನಾ ನಿರ್ದೇಶಕರು, ಡಿಯುಡಿಸಿ ಇವರು ಈ ವರ್ಷ ಮುಂಗಾರಿನಲ್ಲಿ ಸಾಕಷ್ಟು ಮಳೆಯಾಗಿದ್ದು, ಆನೇಕಲ್ ತಾಲ್ಲೂಕಿನಲ್ಲಿ ನಗರಸಭೆ ಮತ್ತು ಪುರಸಭೆಗಳಲ್ಲಿ ಹೆಚ್ಚಿನ ನೀರಿನ ಸಮಸ್ಯೆ ಉದ್ಭವಿಸಿರುವುದಿಲ್ಲವೆಂದೂ, ಹೆಬ್ಬಗೋಡಿಯಲ್ಲಿ ಮಾತ್ರ 3 ಬಾಡಿಗೆ ಟ್ಯಾಂಕರ್‌ಗಳನ್ನು ಉಪಯೋಗಿಸಿ ಪ್ರತಿದಿನ 29 ಟ್ರಿಪ್‌ಗಳನ್ನು ನೀಡುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಮುಂದುವರೆದು, 4 ನಗರ ಸ್ಥಳೀಯ ಸಂಸ್ಥೆಗಳು ಎಲ್‌ಓಎ ಅನ್ನು ಇದೇ ಮಾಹೆಯ 25ನೇ ತಾರೀಖಿನೊಳಗೆ ನೀಡಬೇಕೆಂದು ಈಗಾಗಲೇ ಕರೆಯಲಾಗಿರುವ 2 ಟೆಂಡರ್‌ಗಳ ಕುರಿತು ಮುಂದಿನ ಪ್ರಕ್ರಿಯೆಗಳನ್ನು ಶೀಘ್ರವಾಗಿ ಮುಗಿಸಿ, ದಿನಾಂಕ:20.10.2020 ರೊಳಗಾಗಿ ಕಾರ್ಯಾದೇಶವನ್ನು ನೀಡಲು ಎಲ್‌ಓಎ ನೀಡಬೇಕೆಂದು ಸೂಚಿಸಲಾಯಿತು.

(ಯೋಜನಾ ನಿರ್ದೇಶಕರು, ಡಿಯುಡಿಸಿ ಹಾಗೂ ನಗರಸಭೆ ಮತ್ತು ಪುರಸಭೆಗಳ ಮುಖ್ಯಾಧಿಕಾರಿಗಳು)

8. <u>ಸಕಾಲ ಪ್ರಗತಿ:</u>

ದಿನಾಂಕ:16-09-2020 ರವರೆಗೆ ಈ ತಿಂಗಳಲ್ಲಿ ಸಕಾಲದಡಿಯಲ್ಲಿ ಐದು ತಾಲ್ಲೂಕುಗಳಿಂದ ಒಟ್ಟು 28591 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 25981 ಅರ್ಜಿಗಳು ಸಕಾಲದ ಕಾಲಮಿತಿಯೊಳಗೆ ವಿಲೇವಾರಿ ಮಾಡಿದ್ದು, ಇನ್ನು ವಿಲೇವಾರಿಗಾಗಿ 877 ಅರ್ಜಿಗಳು ಬಾಕಿ ಇರುವುದನ್ನು ಗಮನಿಸಿ, ಇವುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ಸೂಚಿಸಲಾಯಿತು.

9. <u>ಪೈಕಿ ಆರ್‌ಟಿಸಿ:</u>

ಬೆಂಗಳೂರು ನಗರ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ದಿನಾಂಕ: 14/9/2020 ರ ಅಂತ್ಯಕ್ಕೆ ಒಟ್ಟು 12034 ಬಾಕಿ ಇರುವುದನ್ನು ಗಮನಿಸಿದ ಸಭೆಯು ಇವುಗಳನ್ನು ಕಾಲಮಿತಿಯೊಳಗೆ ಇತ್ಯರ್ಥ ಪಡಿಸುವಂತೆ ಸೂಚಿಸಲಾಯಿತು.
(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಮತ್ತು ಎಲ್ಲಾ ತಹಶೀಲ್ದಾರ್‌ಗಳು)

10. <u>3 ಮತ್ತು 9 ಮಿಸ್ ಮ್ಯಾಚ್:</u>

ನಗರ ಜಿಲ್ಲೆಗೆ ಸಂಬಂಧಿಸಿದಂತೆ ದಿನಾಂಕ:14/9/2020ರ ಅಂತ್ಯಕ್ಕೆ ಒಟ್ಟು 20891 ಬಾಕಿ ಇರುವುದನ್ನು ಗಮನಿಸಿದ ಸಭೆಯು ಇವುಗಳನ್ನು ಸಹ ಆದ್ಯತೆ ಮೇರೆಗೆ ಮುಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪವಿಭಾಗ)

11. <u>ಸಾಮಾಜಿಕ ಭದ್ರತಾ ಯೋಜನೆ ಪ್ರಗತಿ ವಿವರ:</u>

| ಕ್ರಮ ಸಂಖ್ಯೆ | ಯೋಜನೆಗಳ ಹೆಸರು | ಆಗಸ್ಟ್ ತಿಂಗಳ ಪ್ರಾರಂಭದಲ್ಲಿ ಬಾಕಿ ಇದ್ದ ಹಾಗೂ ಈ ತಿಂಗಳಲ್ಲಿ ಸ್ವೀಕರಿಸಿದ ಅರ್ಜಿಗಳು | ಈ ಅರ್ಜಿಗಳಲ್ಲಿ ಅರ್ಹ ಫಲಾನುಭವಿಗಳಿಗೆ ಮಂಜೂರು ಮಾಡಿದ ಅರ್ಜಿಗಳ ಸಂಖ್ಯೆ | ತಿರಸ್ಕೃತ ಗೊಂಡ ಅರ್ಜಿಗಳ ಸಂಖ್ಯೆ | ತಿಂಗಳ ಅಂತ್ಯಕ್ಕೆ ಬಾಕಿ ಉಳಿದ ಅರ್ಜಿಗಳ ಸಂಖ್ಯೆ | ಈ ಯೋಜನೆಯಡಿ ಇದುವರೆಗೂ ಪ್ರಯೋಜನ ಪಡೆದಿರುವ ಎಲ್ಲಾ ವರ್ಗದ ಫಲಾನುಭವಿಗಳ ಸಂಖ್ಯೆ |
|---|---|---|---|---|---|---|
| 1 | ವೃದ್ಧಾಪ್ಯ ವೇತನ: | 1729 | 680 | 165 | 884 | 79545 |
| 2 | ವಿಧವಾ ವೇತನ: | 1199 | 387 | 113 | 699 | 123713 |
| 3 | ಅಂಗವಿಕಲವೇತನ: | 285 | 121 | 22 | 142 | 58862 |

| | | | | | | |
|---|---|---|---|---|---|---|
| 4 | ಸಂಧ್ಯಾ ಸುರಕ್ಷಾ | 1297 | 370 | 167 | 760 | 180274 |
| 5 | ಮನಸ್ವಿನಿ | 56 | 15 | 5 | 36 | 3872 |
| 6 | ಮೈತ್ರಿ | 0 | 0 | 0 | 0 | 811 |
| 7 | ಆದರ್ಶ ವಿವಾಹ | 0 | 0 | 0 | 0 | 0 |
| 8 | ರೈತ ಪತ್ನಿ ವಿಧವಾ ವೇತನ | 2 | 1 | 1 | 0 | 2 |
| 9 | ಆಸಿಡ್ ದಾಳಿಗೆ ಒಳಗಾದ ಮಹಿಳೆಗೆ ಸಹಾಯಧನ | 16 | 0 | 0 | 16 | 1 |
| 10 | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | 485 | 82 | 19 | 384 | 4745 |
| 11 | ಅಂತ್ಯ ಸಂಸ್ಕಾರ ಯೋಜನೆ | 296 | 249 | 0 | 47 | 2088 |
| | ಒಟ್ಟು | 5365 | 1905 | 492 | 2968 | 453190 |

ಮೇಲ್ಕಂಡ ವಿವಿಧ ಯೋಜನೆಗಳಡಿ ಒಟ್ಟು ಇನ್ನು 2968 ಅರ್ಜಿಗಳು ವಿಲೇವಾರಿಗೆ ಬಾಕಿ ಇರುವುದನ್ನು ಗಮನಿಸಿ ಅವುಗಳನ್ನು ಆದ್ಯತೆ ಮೇರೆಗೆ ಇತ್ಯರ್ಥಗೊಳಿಸಲು ಸೂಚಿಸಲಾಯಿತು.

12) <u>ಆಹಾರ ಇಲಾಖೆ:</u>

1) ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 5 ತಾಲ್ಲೂಕುಗಳಿಂದ ಒಟ್ಟು 565 ನ್ಯಾಯಬೆಲೆ ಅಂಗಡಿಗಳು ಇದ್ದು, ಆಗಸ್ಟ್ 2020 ರ ಅಂತ್ಯದಲ್ಲಿ 499280 ಬಿಪಿಎಲ್ ಕಾರ್ಡ್‌ಗಳು, ಎಎವೈ ಕಾರ್ಡ್‌ಗಳು–13077 ಹಾಗೂ ಎಪಿಎಲ್ ಕಾರ್ಡ್‌ಗಳು–23340 ಗಳಿದ್ದು, ಒಟ್ಟು 535697 ಕಾರ್ಡುಗಳು ಇರುತ್ತದೆ.
2) 2019–20ನೇ ಸಾಲಿನಲ್ಲಿ ಹೊಸ ಪಡಿತರ ಚೀಟಿಗಾಗಿ ಬಂದ ಅರ್ಜಿಗಳು–24501 ಇದ್ದು ಇದರಲ್ಲಿ 1407 ತಿರಸ್ಕೃತಗೊಂಡಿದ್ದು, 15901 ಅರ್ಜಿಗಳನ್ನು ವಿಲೇವಾರಿ ಮಾಡಿದ್ದು, ಬಾಕಿ 7193 ಇರುವುದನ್ನು ಗಮನಿಸಲಾಯಿತು. ಆದಷ್ಟು ಬೇಗ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಲು ಸೂಚಿಸಲಾಯಿತು.
3) ಸೆಪ್ಟೆಂಬರ್ 15ನೇ ತಾರೀಖಿನವರೆಗೆ ಗೋಧಿ–96.38%, ಕಡಲೇಕಾಳು–69.91%, ಎನ್‌ಎಫ್‌ಎಸ್‌ಎ ಅಕ್ಕಿ–81.95% ಹಾಗೂ ಪಿಎಂಜಿಕೆಎವೈ ರೈಸ್ 95.42% ಎತ್ತುವಳಿ ಮಾಡಿರುವುದನ್ನು ಗಮನಿಸಲಾಯಿತು.
(ಕ್ರಮ: ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ)

13) <u>ಭೂ ದಾಖಲೆಗಳ ಉಪ ನಿರ್ದೇಶಕರ ಕಛೇರಿ:</u>

1) **ಪೋಡಿ ಪ್ರಕರಣಗಳ ವಿಲೇವಾರಿ:**

ಆಗಸ್ಟ್ ಮಾಹೆಯ ಅಂತ್ಯದಲ್ಲಿ ವಿವಿಧ ಹಂತಗಳ ಸರ್ವೇಗಾಗಿ ಒಟ್ಟು 5860 ಅರ್ಜಿಗಳು ಬಂದಿದ್ದು ಇದರಲ್ಲಿ 838 ಅರ್ಜಿಗಳನ್ನು ವಿಲೇವಾರಿ ಮಾಡಿದ್ದು, ಒಟ್ಟಾರೆ ಪ್ರಗತಿ ಶೇಕಡ 25.4 ಆಗಿರುವುದನ್ನು ಗಮನಿಸಿದ ಸಭೆಯು ಉಳಿದ ಅರ್ಜಿಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಲು ಸೂಚಿಸಲಾಯಿತು.
(ಕ್ರಮ: ಉಪನಿರ್ದೇಶಕರು, ಭೂ ದಾಖಲೆಗಳ ಕಛೇರಿ)

ಆಗಸ್ಟ್ ಮಾಹೆಯ ಅಂತ್ಯದಲ್ಲಿ ಒಟ್ಟು 13526 ಅರ್ಜಿಗಳು ಇದ್ದು ಇದರಲ್ಲಿ 996 ಅರ್ಜಿಗಳನ್ನು ವಿಲೇವಾರಿ ಮಾಡಿದ್ದು, ಶೇಕಡ 24 ಪ್ರಗತಿಯಾಗಿರುವುದನ್ನು ಗಮನಿಸಿದ ಸಭೆಯು, ಉಳಿಕೆ ಅರ್ಜಿಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಲು ಸೂಚಿಸಲಾಯಿತು.

(ಕ್ರಮ: ಉಪನಿರ್ದೇಶಕರು, ಭೂ ದಾಖಲೆಗಳ ಕಛೇರಿ)

ಕೋವಿಡ್ ಕರ್ತವ್ಯಕ್ಕಾಗಿ ಸರ್ವೇಯರ್‌ಗಳನ್ನು ಬಿಬಿಎಂಪಿ ಅಧಿಕಾರಿಗಳು ನಿಯೋಜಿಸಿಕೊಂಡಿರುವುದರಿಂದ ಸಾರ್ವಜನಿಕರಿಗೆ ಸರ್ವೇ ಕಾರ್ಯದಲ್ಲಿ ತೊಂದರೆಯಾಗಿರುವ ಬಗ್ಗೆ ದಿನಪತ್ರಿಕೆಗಳಲ್ಲಿ ವರದಿ ಬರುತ್ತಿದ್ದು, ಈ ತೊಂದರೆಯನ್ನು ತಪ್ಪಿಸುವ ಸಲುವಾಗಿ ನಿಯೋಜನೆಗೊಂಡಿರುವ ಸರ್ವೇಯರ್‌ಗಳನ್ನು ಕೋವಿಡ್ ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಸಭೆಯಲ್ಲಿ ಉಪನಿರ್ದೇಶಕರು ಕೋರಿದರು.

ಈ ಬಗ್ಗೆ ಬಿ.ಬಿ.ಎಂ.ಪಿ. ಆಯುಕ್ತರೊಂದಿಗೆ ಮಾತನಾಡಿ ಕ್ರಮ ಕೈಗೊಳ್ಳುವುದಾಗಿ ಭರವಸೆಯನ್ನು ನೀಡಲಾಯಿತು.

14) <u>ಸಾರ್ವಜನಿಕ ಶಿಕ್ಷಣ ಇಲಾಖೆ:</u>

2020-21ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ವಿಭಾಗವು ಶೇ 65.76 ರಷ್ಟು ಫಲಿತಾಂಶವನ್ನು ಪಡೆದಿದ್ದು, ಕಳೆದ ಬಾರಿ 31ನೇ ಸ್ಥಾನದಲ್ಲಿದ್ದು, ಈ ಬಾರಿ 27ನೇ ಸ್ಥಾನಕ್ಕೆ ಬಂದಿರುತ್ತದೆ. ಬೆಂಗಳೂರು ಉತ್ತರ ವಿಭಾಗವು ಶೇಕಡ 79.31 ಫಲಿತಾಂಶ ಬಂದಿದ್ದು, ಕಳೆದ ಬಾರಿ 26ನೇ ಸ್ಥಾನದಲ್ಲಿದ್ದು, ಈ ಬಾರಿ 16ನೇ ಸ್ಥಾನವನ್ನು ಪಡೆದಿರುತ್ತದೆ.

ಈ ಬಾರಿ ನಡೆಯುವ ಪೂರಕ ಪರೀಕ್ಷೆ (ಸಪ್ಲಿಮೆಂಟರಿ)ಗೆ ಎರಡು ವಿಭಾಗದಿಂದ 32599 ವಿದ್ಯಾರ್ಥಿಗಳು ಪರೀಕ್ಷೆ ಹಾಜರಾಗಬೇಕಿದ್ದು, ಒಟ್ಟು 122 ಸೆಂಟರ್‌ಗಳನ್ನು ಗುರುತಿಸಿದ್ದು, ಇದರಲ್ಲಿ ಖಾಸಗಿ ಶಾಲೆಗಳಲ್ಲಿ ಕೋವಿಡ್ ಕುರಿತು ಮುಂಜಾಗ್ರತಾ ಕ್ರಮದ ಬಗ್ಗೆ ಸ್ಯಾನಿಟೈಸರ್ ಇತ್ಯಾದಿಗಳ ವೆಚ್ಚದ ಬಗ್ಗೆ ಆ ಸಂಸ್ಥೆಗಳೇ ಭರಿಸಬೇಕೆಂದು, ಉಳಿದಂತೆ ಸರ್ಕಾರಿ ಶಾಲೆಗಳಲ್ಲಿ ಮುಂಜಾಗ್ರತಾ ಕ್ರಮಕ್ಕಾಗಿ ಆಗುವ ವೆಚ್ಚವನ್ನು ಸರ್ಕಾರವು ಶಾಲೆಗಳಿಗೆ ಬಿಡುಗಡೆ ಮಾಡಿದ ಅನುದಾನದಲ್ಲಿ ಭರಿಸಬೇಕೆಂದು ಸೂಚಿಸಲಾಯಿತು. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳನ್ನು ಪರೀಕ್ಷಿಸಿ, ಕೋವಿಡ್ ಸೋಂಕು ಇದ್ದಲ್ಲಿ ಅವರನ್ನು ಪ್ರತ್ಯೇಕ ಕೋಣೆಯಲ್ಲಿ ಬರೆಯುವ ವ್ಯವಸ್ಥೆಗಾಗಿ 3 ಕೋವಿಡ್ ರೂಂಗಳನ್ನು ಮಾಡಿರುವುದಾಗಿ ಉಪ ನಿರ್ದೇಶಕರು ಸಭೆಗೆ ತಿಳಿಸಿದರು. ಎರಡು ವಿಭಾಗದ ಉಪ ನಿರ್ದೇಶಕರು ಕೈಗೊಂಡ ವ್ಯವಸ್ಥೆಗಳ ಬಗ್ಗೆ ಪರಿಶೀಲಿಸಲು ಎರಡು ವಿಭಾಗಗಳ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

2021-22ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಇನ್ನು ಉತ್ತಮ ರೀತಿಯಲ್ಲಿ ಪಡೆಯುವ ದೃಷ್ಟಿಯಿಂದ ಆಂಗ್ಲಭಾಷೆ, ಗಣಿತ ಮತ್ತು ವಿಜ್ಞಾನದ ವಿಷಯಗಳಿಗೆ ವಾರದಲ್ಲಿ ಒಂದು ದಿನ ವಿಶೇಷ ನುರಿತ ತಜ್ಞರಿಂದ ತರಬೇತಿಯನ್ನು ವಿದ್ಯಾರ್ಥಿಗಳಿಗೆ ಕೊಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೆಂದೂ, ಉಳಿದಂತೆ ಸ್ಟಡಿ ಮೆಟಿರಿಯಲ್ ಡೆವಲಪ್ ಮಾಡಿರುವುದಾಗಿಯೂ ಸಭೆಗೆ ಉಪ ನಿರ್ದೇಶಕರುಗಳು ತಿಳಿಸಿದರು.

ಕೆಳಹಂತದ ಅಂದರೆ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಕಲಿಕೆಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಸಭೆಯು ತಿಳಿಯಪಡಿಸಿತು.

ಎರಡು ವಿಭಾಗಗಳ ಉಪವಿಭಾಗಾಧಿಕಾರಿಗಳು ಸರ್ಕಾರಿ ಶಾಲೆಗಳ, ದಾನದಿಂದ ಬಂದ ಶಾಲೆಗಳ ಜಾಗಗಳು ಹೆಚ್ಚು ಒತ್ತುವರಿಯಾಗುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಉಪನಿರ್ದೇಶಕರು ಅವರ

ವಿಭಾಗಗಳಿಗೆ ಸೇರಿದ ಶಾಲಾ ಜಾಗಗಳನ್ನು ರಕ್ಷಣೆ ಮಾಡಿಕೊಳ್ಳಲು ಕಂದಾಯ ಇಲಾಖೆಯ ಅಧಿಕಾರಿಗಳ ಸಹಯೋಗದಲ್ಲಿ ದಾಖಲೆಗಳನ್ನು ಪರಿಶೀಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ಮತ್ತು ದಕ್ಷಿಣ ವಿಭಾಗ ಹಾಗೂ ಎರಡು ವಿಭಾಗಗಳ ಉಪವಿಭಾಗಾಧಿಕಾರಿಗಳು)

15) <u>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:</u>

ಗುಂಜೂರಿನಲ್ಲಿ ಕ್ರೀಡಾಂಗಣಕ್ಕೆ ನೀಡಿದ ಸುಮಾರು 24 ಎಕರೆ ಜಮೀನು, ಡೀಮ್ಡ್ ಫಾರೆಸ್ಟ್ ಜಾಗವೆಂದು ತಕರಾರು ಮಾಡುತ್ತಿರುವುದರ ಬಗ್ಗೆ ಇಲಾಖಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ವಾಸ್ತವ ಸ್ಥಿತಿಯ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯುವಂತೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಗಳು)

16) <u>ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ:</u>

1) 2015 ಲೆಕ್ಕ ಶೀರ್ಷಿಕೆಯಲ್ಲಿ 14 ಕಾಮಗಾರಿಗಾಗಿ ರೂ.160.50 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ 6 ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನು 8 ಕಾಮಗಾರಿಗಳು ಬಾಕಿ ಇರುತ್ತದೆ.
2) 4215 ಲೆಕ್ಕ ಶೀರ್ಷಿಕೆಯಲ್ಲಿ 102 ಕಾಮಗಾರಿಗಳಿಗಾಗಿ ರೂ. 1137.81 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ 71 ಕಾಮಗಾರಿಗಳು ಪೂರ್ಣಗೊಂಡಿದ್ದು, 31 ಕಾಮಗಾರಿಗಳು ಬಾಕಿ ಇರುತ್ತದೆ
3) 4215 ರಡಿ 239 ಕಾಮಗಾರಿಗಳಿಗಾಗಿ ರೂ. 980.00 ಲಕ್ಷಗಳು ಬಿಡುಗಡೆಯಾಗಿದ್ದು, ಇದರಲ್ಲಿ 196 ಕಾಮಗಾರಿಗಳು ಪೂರ್ಣಗೊಂಡಿದ್ದು, 43 ಕಾಮಗಾರಿಗಳು ಬಾಕಿ ಇರುತ್ತವೆ
4) ಎಸ್‌ಡಿಪಿ–4215 ರಡಿ 13 ಕಾಮಗಾರಿಗಳಿಗಾಗಿ ರೂ.263.16 ಲಕ್ಷಗಳು ಬಿಡುಗಡೆಯಾಗಿದ್ದು, 5 ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ 8 ಕಾಮಗಾರಿ ಇರುತ್ತದೆ.
5) ಸಿಆರ್‌ಎಫ್‌ರಡಿ 518 ಕಾಮಗಾರಿಗಳಿಗಾಗಿ ರೂ.2765.92 ಲಕ್ಷಗಳು ಬಿಡುಗಡೆಯಾಗಿದ್ದು, 334 ಕಾಮಗಾರಿಗಳು ಪೂರ್ಣಗೊಂಡಿದ್ದು, 184 ಕಾಮಗಾರಿಗಳು ಬಾಕಿ ಇರುತ್ತದೆ.

ವಿವಿಧ ಯೋಜನೆಯಡಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

(ಕ್ರಮ: ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ)

17) <u>ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ:</u>

2020-21ನೇ ಸಾಲಿನಲ್ಲಿ ಬೆಂಗಳೂರು ನಗರಕ್ಕೆ 9 ಕಾಮಗಾರಿಗಳಿಗಾಗಿ ಒಟ್ಟು ರೂ.750.00 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಇದುವರೆಗೂ 58.47% ಪ್ರಗತಿ ಸಾಧಿಸಿರುವುದನ್ನು ಗಮನಿಸಿದ ಸಭೆಯು ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

18) <u>ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆ:</u>

ಈ ಯೋಜನೆಯಡಿ ಒಟ್ಟು 36 ಗ್ರಾಮಗಳನ್ನು ಆಯ್ಕೆ ಮಾಡಿದ್ದು, ರೂ.3600 ಲಕ್ಷಗಳ ಅನುದಾನವಿದ್ದು ಇದುವರೆಗೂ 2169.70 ಲಕ್ಷಗಳಷ್ಟು ಹಣ ಬಿಡುಗಡೆ ಮಾಡಿದ್ದು ಶೇಕಡ 81 ಪ್ರಗತಿಯಾಗಿರುವುದನ್ನು ಸಭೆಯು ಗಮನಿಸಿತು. ಉಳಿದ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

19) **ಎನ್‌ಆರ್‌ಎಲ್‌ಎಂ ಯೋಜನೆ:**

ಒಟ್ಟು ಐದು ತಾಲ್ಲೂಕುಗಳಲ್ಲಿ ವಿವಿಧ ಚಟುವಟಿಕೆಗಳಿಗಾಗಿ ಗುಂಪುಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ವಿವಿಧ ಕಾರ್ಯಗಳಿಗಾಗಿ ತರಬೇತಿಯನ್ನು ನೀಡಿರುವ ಅಂಕಿಅಂಶಗಳನ್ನು ಗಮನಿಸಲಾಯಿತು.

20) **ನರೇಗಾ ಯೋಜನೆ:**

2020–21ನೇ ಸಾಲಿನಲ್ಲಿ ಐದು ತಾಲ್ಲೂಕುಗಳಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ನೀಡಿರುವ ಅಂಕಿಅಂಶಗಳನ್ನು ಗಮನಿಸಲಾಯಿತು. ಒಟ್ಟು ರೂ.160.38 ಲಕ್ಷಗಳ ಅನುದಾನವಿದ್ದು, ಇದರಲ್ಲಿ ರೂ. 143.15 ಲಕ್ಷಗಳನ್ನು ಈ ಯೋಜನೆಯಡಿ ಕೆಲಸ ಮಾಡಿದವರಿಗೆ ವೇತನ ಪಾವತಿಸಿದ್ದು, ಉಳಿದಿರುವ ಅನುದಾನವನ್ನು ವೇತನ ಪಾವತಿಗೆ ಬಾಕಿ ಇರುವವರಿಗೆ ಪಾವತಿಸುವಂತೆ ಸೂಚಿಸಲಾಯಿತು.

21) **ಕೋವಿಡ್ ಬಗ್ಗೆ**

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕು ಕೇಂದ್ರಗಳಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಇರುವ ಸೌಲಭ್ಯಗಳ ಕುರಿತು ಆಯಾ ತಾಲ್ಲೂಕು ತಹಶೀಲ್ದಾರ್‌ಗಳು ಸ್ಥಳಕ್ಕೆ ಭೇಟಿ ನೀಡಿ, ಅಲ್ಲಿರುವ ಮೂಲಭೂತ ಸೌಕರ್ಯಗಳ ಬಗ್ಗೆ ವರದಿ ನೀಡುವಂತೆ ಸೂಚಿಸಲಾಯಿತು.

ಪ್ರತಿ ಆಸ್ಪತ್ರೆಯಲ್ಲಿ ಇರುವ ಜನರಲ್ ಬೆಡ್, ಹೆಚ್‌ಡಿಯು ಬೆಡ್, ವೆಂಟಿಲೇಟರ್ ಹಾಗೂ ವೆಂಟಿಲೇಟರ್ ಐ.ಸಿ.ಯು. ಬೆಡ್‌ಗಳ ಕುರಿತು ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಡಾಕ್ಟರ್‌ಗಳ ಸಂಖ್ಯೆಗಳ ಬಗ್ಗೆ ವರದಿಯನ್ನು ನೀಡಬೇಕೆಂದು ಸೂಚಿಸಲಾಯಿತು.

ಪ್ರತಿ ಆಸ್ಪತ್ರೆಯಲ್ಲಿ ಖಾಲಿ ಇರುವ ಬೆಡ್‌ಗಳ ಬಗ್ಗೆ ವಾರುವಾರು ವಿವರಗಳನ್ನು ನೀಡಬೇಕೆಂದು, ಅಲ್ಲಿ ದಾಖಲಾಗಿರುವ ರೋಗಿಗಳ ಸಂಖ್ಯೆ, ಖಾಲಿ ಇರುವ ಬೆಡ್‌ಗಳ ವಿವರಗಳನ್ನು ನೀಡಿದಲ್ಲಿ ಬೇರೆ ರೋಗಿಗಳನ್ನು ಹಸ್ತಾಂತರಿಸಲು ಅನುಕೂಲವಾಗುವುದರಿಂದ ಈ ಮಾಹಿತಿಯನ್ನು ಬಿ.ಬಿ.ಎಂ.ಪಿ. ಪೋರ್ಟಲ್‌ನಲ್ಲಿ ದಾಖಲಿಸಬೇಕೆಂದು ಸೂಚಿಸಿದರು.

ಪ್ರತಿ ಆಸ್ಪತ್ರೆಗೆ ಭೇಟಿ ನೀಡಿದಾಗ ಅಲ್ಲಿರುವ ವೆಂಟಿಲೇಟರ್‌ಗಳು ಸಮರ್ಪಕವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೆಯೇ, ಇಲ್ಲವೆ? ಆಕ್ಸಿಜನ್ ವ್ಯವಸ್ಥೆ ಸಮರ್ಪಕವಾಗಿ ಇದೆಯೇ ಎಂಬುದರ ಬಗ್ಗೆ ಆಯಾ ತಾಲ್ಲೂಕು ತಹಶೀಲ್ದಾರ್‌ಗಳು ವರದಿ ನೀಡಬೇಕೆಂದು ಸೂಚಿಸಲಾಯಿತು. ತದ ನಂತರ ವೆಂಟಿಲೇಟರ್‌ಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸದೆ ಇದ್ದಲ್ಲಿ ಈ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಯಿತು.

ಬೆಂಗಳೂರು ನಗರ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸ್ತುತ ಕೋವಿಡ್ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದನ್ನು ಗಮನಿಸಿದ ಸಭೆಯು, ಕೋವಿಡ್ ಟೆಸ್ಟ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸೋಂಕಿತ ಲಕ್ಷಣ ಇಲ್ಲದೆ ಪಾಸಿಟಿವ್ ಬಂದಂತಹ ವ್ಯಕ್ತಿಗಳನ್ನು ಮನೆಯಲ್ಲಿಯೇ ಐಸೋಲೇಷನ್ ಮಾಡಿದಲ್ಲಿ, ಅಂತಹ ಮನೆಗಳಲ್ಲಿ ರೋಗಿಗಳಿಗೆ ಪ್ರತ್ಯೇಕವಾಗಿ ಇರಲು ಸಾಕಷ್ಟು ಅನುಕೂಲತೆಗಳು ಇವೆಯೇ? ಇಲ್ಲದಿದ್ದಲ್ಲಿ ಕೂಡಲೇ ಅವರನ್ನು ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ದಾಖಲಿಸುವ ಕುರಿತು ಕ್ರಮ ವಹಿಸಬೇಕೆಂದು, ಮನೆಯಲ್ಲಿಯೇ ಐಸೋಲೇಷನ್ ಆದವರು ಕೋವಿಡ್–19ರ ಸೂತ್ರಗಳನ್ನು ಪಾಲಿಸುತ್ತಿದ್ದಾರೆಯೇ ಇಲ್ಲವೆ ಎಂಬುದನ್ನು ಬೂತ್

ಲೆವೆಲ್ ಕಮಿಟಿಯವರು ಪಿಹೆಚ್‌ಸಿ ಆರೋಗ್ಯಾಧಿಕಾರಿಗಳೊಂದಿಗೆ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕೆಂದು. ಈ ಕಮಿಟಿಯ ಬಗ್ಗೆ ತಹಶೀಲ್ದಾರ್‌ಗಳು ಮತ್ತು ಉಪವಿಭಾಗಾಧಿಕಾರಿಗಳು ಮೇಲ್ವಿಚಾರಣೆಯನ್ನು ವಹಿಸಬೇಕೆಂದು ಸೂಚಿಸಲಾಯಿತು.

ಮುಂದುವರೆದು ಮನೆಯಲ್ಲಿಯೇ ಐಸೋಲೇಷನ್ ಆಗಿರುವ ರೋಗಿಗಳಲ್ಲಿ ಸಾರಿ, ಐಎಲ್‌ಐ, ಕೋಮಾರ್ಬಿಟ್ ಪ್ರಕರಣಗಳನ್ನು ಗುರುತಿಸಿ, ಹಿರಿಯ ನಾಗರೀಕರು ಕೋಮಾರ್ಬಿಟ್ ಸ್ಥಿತಿಯಲ್ಲಿರುವವರನ್ನು ಹೋಮ್ ಐಸೋಲೇಷನ್ ಮಾಡದೇ ಕೂಡಲೇ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳಿಗೆ ದಾಖಲಿಸಬೇಕೆಂದು. ಇದರಿಂದ ಮುಂದೆ ಅವರು ಉಸಿರಾಟದ ತೊಂದರೆ ಬಂದಾಗ ಕೂಡಲೇ ವೆಂಟಿಲೇಟರ್ ಅಳವಡಿಸುವ ಪ್ರಕ್ರಿಯೆಗೆ ಅನುಕೂಲವಾಗುತ್ತದೆಂದು, ಇದರಿಂದ ಸಾವಿನ ಪ್ರಮಾಣವನ್ನು ಕಡಿಮೆಗೊಳಿಸಬಹುದೆಂದು ತಿಳಿಸುತ್ತಾ, ಹೋಮ್ ಐಸೋಲೇಷನ್ ಮಾಡಿದ ಮನೆಯ ಮಾಹಿತಿಯನ್ನು ಆ ಮನೆಯ/ಸಮುಚ್ಛಯದಲ್ಲಿ ಅಕ್ಕ-ಪಕ್ಕ ವಾಸಿಸುತ್ತಿರುವ ನೆರೆ–ಹೊರೆಯವರಿಗೆ/ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್/ವಸತಿ ಸಮುಚ್ಛಯದ ಮಾಲೀಕರಿಗೆ ಕಡ್ಡಾಯವಾಗಿ ತಿಳಿಸಬೇಕೆಂದು, ಇದರಿಂದ ಕೋವಿಡ್ ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುವುದನ್ನು ತಡೆಗಟ್ಟಬಹುದೆಂದು, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಯಿತು.

ಹೆಚ್ಚು ಹೆಚ್ಚು ಕಾಂಟ್ಯಾಕ್ಟ್ ಟ್ರೇಸಿಂಗ್ ಮಾಡುವಂತೆ ಇದರಿಂದ ಪ್ರೈಮರಿ ಮತ್ತು ಸೆಕೆಂಡರಿ ಕಾಂಟ್ಯಾಕ್ಟ್‌ಗಳನ್ನು ಗುರುತಿಸಿದಲ್ಲಿ, ಸಾಂಕ್ರಾಮಿಕವಾಗಿ ಹರಡುವುದನ್ನು ತಡೆಯಬಹುದಾಗಿದ್ದು, ಈ ಮಟ್ಟದಲ್ಲಿ ಎಲ್ಲಾ ಪಿಹೆಚ್‌ಸಿ ಕೇಂದ್ರಗಳಲ್ಲಿರುವ ಆರೋಗ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹೆಚ್ಚು ಮುತುವರ್ಜಿ ವಹಿಸಿ ಕರ್ತವ್ಯ ನಿರ್ವಹಿಸಬೇಕೆಂದು ಸೂಚಿಸಲಾಯಿತು.

ಬಿಬಿಎಂಪಿ ವೆಬ್‌ಸೈಟ್ ಪೋರ್ಟಲ್‌ಗೆ ಹೋಗಿ ಅಲ್ಲಿ ತಾಲ್ಲೂಕು ಮಟ್ಟದಲ್ಲಿ ತೋರಿಸುತ್ತಿರುವ ಅಂಕಿಅಂಶಗಳನ್ನು ಸರಿಯಾಗಿ ದಾಖಲಾಗಿದೆಯೇ/ದಾಖಲಾಗುತ್ತಿದೆಯೇ ಎಂಬುದನ್ನು ಗಮನಿಸಿ ಅದನ್ನು ಸರಿಪಡಿಸಿಕೊಡಿಸಿಕೊಳ್ಳಬೇಕೆಂದು. ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ದಾಖಲಾಗುವ ರೋಗಿಗಳಲ್ಲಿ ಬೆಂಗಳೂರು ನಗರಕ್ಕೆ ಸಂಬಂಧಪಟ್ಟವರು ಎಷ್ಟು ಜನ ಹಾಗೂ ಬೆಂಗಳೂರು ನಗರಕ್ಕೆ ಸಂಬಂಧಪಡದೆ ಇರುವವರನ್ನು ವಿಂಗಡಿಸಬೇಕೆಂದು. ಹೀಗೆ ಮಾಡಿದಲ್ಲಿ ಬೆಂಗಳೂರು ನಗರಕ್ಕೆ ಸಂಬಂಧಿಸಿದವರನ್ನು ಬ್ಲಾಕ್ ಮಾಡಬಹುದಾಗಿರುವ ಬಗ್ಗೆ ಅಧಿಕಾರಿಗಳಿಗೆ ತಿಳಿಸಲಾಯಿತು.

ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಬಿಬಿಎಂಪಿ ವ್ಯಾಪ್ತಿಯನ್ನು ಹೊರತು ಪಡಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಟೆಸ್ಟಿಂಗ್ ಮಾಡಲು 2500 ಗುರಿಯನ್ನು ನಿಗಧಿಪಡಿಸಿದ್ದು, ವಿ.ಟಿ.ಎಂ.ಕೊರತೆಯಿಂದ ಅದರಲ್ಲಿ ಕೇವಲ 1000 ಅಥವಾ 1500 ಮಾತ್ರ ಟೆಸ್ಟಿಂಗ್ ಮಾಡುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಸರಾಸರಿ 350 ಪಾಸಿಟಿವ್ ಪ್ರಕರಣಗಳು ಪ್ರತಿನಿತ್ಯ ಬರುತ್ತಿದ್ದು, ಆದರೆ ಅದಕ್ಕನುಗುಣವಾಗಿ ಟೆಸ್ಟಿಂಗ್ ನಡೆಯದೆ ಇರುವುದನ್ನು ಗಮನಿಸಿದ ಸಭೆಯು, ಒಂದು ಪಾಸಿಟಿವ್ ಪ್ರಕರಣಕ್ಕೆ ಶೇಕಡ 10ರಂತೆ ಟೆಸ್ಟಿಂಗ್ (ಸಾರಿ, ಐಎಲ್‌ಐ ಪ್ರಕರಣಗಳು ಒಳಗೊಂಡಂತೆ) ಮಾಡಲು ಅವಶ್ಯವಿರುವ ವಿ.ಟಿ.ಎಂ.ಗಳನ್ನು ಡ್ರಗ್ ಲಾಜಿಸ್ಟಿಕ್ ಸಂಸ್ಥೆಯೊಂದಿಗೆ ಸಮನ್ವಯ ಸಾಧಿಸಿಕೊಂಡು ಮುಂದಿನ 15 ದಿನಗಳಿಗೆ ಅವಶ್ಯವಿರುವ 50000 ವಿ.ಟಿ.ಎಂ.ಗಳನ್ನು ಪಡೆಯುವ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು.

ಮನೆಯಲ್ಲಿಯೇ ಐಸೋಲೇಷನ್ ಆದಂತಹ ವ್ಯಕ್ತಿಗಳ ಪ್ರೈಮರಿ ಕಾಂಟ್ಯಾಕ್ಟ್‌ಗಳ ಬಗ್ಗೆ ಕೂಡಲೇ ಸ್ವಾಬ್ ಟೆಸ್ಟ್ ನಡೆಸತಕ್ಕದೆಂದು, ಇದರಿಂದ ಕೋವಿಡ್ ಸಾಂಕ್ರಾಮಿಕ ರೋಗವು ಬೇಗನೆ ಹರಡುವುದನ್ನು ನಿಯಂತ್ರಿಸಲು ಸಹಕಾರಿಯಾಗುವುದಾಗಿ ತಿಳಿಯಪಡಿಸಿತು.

ಸಾರ್ವಜನಿಕ ಆಸ್ಪತ್ರೆ, ಯಲಹಂಕ ಇಲ್ಲಿನ 3ನೇ ಮಹಡಿಯಲ್ಲಿ ಆರ್.ಟಿ.ಪಿ.ಸಿ.ಆರ್ ಗಂಟಲು ಮತ್ತು ಮೂಗಿನ ದ್ರವ ಪರೀಕ್ಷೆ ನಡೆಸಲು ನೂತನ ಪ್ರಯೋಗ • ಶಾಲೆಯನ್ನು ನಿರ್ಮಾಣ ಮಾಡುವಂತೆ ಯಲಹಂಕ ಶಾಸಕರಾದ ಶ್ರೀ ಎಸ್.ಆರ್. ವಿಶ್ವನಾಥ್, ಇವರು ಸೂಚಿಸಿರುವ ಮೇರೆಗೆ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಯಲಹಂಕ ಇವರು ಜಿಲ್ಲಾಡಳಿತಕ್ಕೆ ಪತ್ರವನ್ನು ಸಲ್ಲಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಕಾಮಗಾರಿಯನ್ನು ಈಗಾಗಲೇ ಕೆ.ಆರ್.ಪುರ ಮತ್ತು ಆನೇಕಲ್ ಸಾರ್ವಜನಿಕ ಆಸ್ಪತ್ರೆಗಳ ಕಾಮಗಾರಿಯನ್ನು ನಿರ್ವಹಿಸಿದ ರೀತಿಯಲ್ಲಿಯೇ ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

ಮೇಲೆ ತಿಳಿಸಿರುವ ಎಲ್ಲಾ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಿದಲ್ಲಿ, ಕರೋನಾ ಸಾಂಕ್ರಾಮಿಕ ರೋಗ ಹೆಚ್ಚಾಗಿ ಹರಡದಂತೆ ಪರಿಣಾಮಕಾರಿಯಾಗಿ ತಡೆಯಬಹುದಾಗಿದ್ದು, ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಸಮರೋಪಾದಿಯಲ್ಲಿ ಕೋವಿಡ್-19ರ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಸೂಚನೆಗಳನ್ನು ನೀಡಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಕುಮಾರ್ ಗಿರಿನಾಥ್ ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲೆ.

ಇವರಿಗೆ:

1) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್
3) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ
4) ಜಿಲ್ಲಾ ಮಟ್ಟದ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ

ಪ್ರತಿಯನ್ನು ಮಾಹಿತಿಗಾಗಿ:

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
2) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು

## ಜಿಲ್ಲೆಯಹೆಸರು: ಬೆಂಗಳೂರುಗ್ರಾಮಾಂತರ

## ಜಿಲ್ಲಾಉಸ್ತುವಾರಿಕಾರ್ಯದರ್ಶಿ: ಶ್ರೀಮತಿ ಹೇಮಲತ

ದಿನಾಂಕ 31.08.2020 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಭೇಟಿ ನೀಡಿ ಕೋವಿಡ್-19(ಕರೋನ ವೈರಸ್‌ನ) ನಿಯಂತ್ರಣಕ್ಕಾಗಿ ಕೈಗೊಂಡಿರುವ ಮುಂಜಾಗ್ರತ ಕ್ರಮಗಳ ಕುರಿತು ಸಭೆ ನಡೆಸಲಾಗಿರುತ್ತದೆ:-

1. ಜಿಲ್ಲೆಯಲ್ಲಿ ಪತ್ತೆಯಾದ ಕೋವಿಡ್-19 ಪ್ರಕರಣಗಳ ಘೋಷ್ವಾರೆ

| ಕ್ರಸಂ | ತಾಲ್ಲೂಕಿನ ಹೆಸರು | ಪತ್ತೆಯಾದ ಒಟ್ಟು ಪ್ರಕರಣಗಳು | ಆಸ್ಪತ್ರೆಯಿಂದ Discharge ಆದ ಪ್ರಕರಣಗಳು | ಸಕ್ರಿಯ ಪ್ರಕರಣಗಳು | ಮರಣ ಹೊಂದಿರುವ ಪ್ರಕರಣಗಳು |
|---|---|---|---|---|---|
| 1 | ದೇವನಹಳ್ಳಿ | 783 | 633 | 146 | 4 |
| 2 | ದೊಡ್ಡಬಳ್ಳಾಪುರ | 1041 | 806 | 224 | 11 |
| 3 | ಹೊಸಕೋಟೆ | 1027 | 842 | 179 | 6 |
| 4 | ನೆಲಮಂಗಲ | 1016 | 862 | 149 | 5 |
| 5 | ಹೊರ ರಾಜ್ಯ ಮತ್ತು ಜಿಲ್ಲೆಯ ಪ್ರಕರಣಗಳು | 627 | 474 | 152 | 1 |
| | ಒಟ್ಟು | 4494 | 3617 | 850 | 27 |

2. ಜಿಲ್ಲೆಯಲ್ಲಿನ ಕಂಟೈನ್‌ಮೆಂಟ್ ವಲಯಗಳ ಘೋಷ್ವಾರೆ

| ಕ್ರಸಂ | ತಾಲ್ಲೂಕಿನ ಹೆಸರು | ಒಟ್ಟು ಕಂಟೈನ್‌ಮೆಂಟ್ ವಲಯಗಳ ಸಂಖ್ಯೆ | ಘೋಷಿತ ಕಂಟೈನ್‌ಮೆಂಟ್ ವಲಯಗಳ ಸಂಖ್ಯೆ | ಚಾಲ್ತಿಯಲ್ಲಿರುವ ಕಂಟೈನ್‌ಮೆಂಟ್ ವಲಯಗಳ ಸಂಖ್ಯೆ |
|---|---|---|---|---|
| 1 | ದೇವನಹಳ್ಳಿ | 107 | 22 | 85 |
| 2 | ದೊಡ್ಡಬಳ್ಳಾಪುರ | 134 | 07 | 127 |
| 3 | ಹೊಸಕೋಟೆ | 139 | 25 | 114 |
| 4 | ನೆಲಮಂಗಲ | 127 | 18 | 109 |
| | ಒಟ್ಟು | 507 | 72 | 435 |

3. ಕೋವಿಡ್-19 ಧೃಡಪಟ್ಟು ಹೋಂ ಐಸೋಲೇಷನ್‌ನಲ್ಲಿರುವ ಪ್ರಕರಣಗಳ ಘೋಷ್ವಾರೆ

| ಕ್ರಸಂ | ತಾಲ್ಲೂಕಿನ ಹೆಸರು | Home Isolation ನಲ್ಲಿರುವ ಒಟ್ಟು ಪ್ರಕರಣಗಳು |
|---|---|---|
| 1 | ದೇವನಹಳ್ಳಿ | 23 |
| 2 | ದೊಡ್ಡಬಳ್ಳಾಪುರ | 68 |
| 3 | ಹೊಸಕೋಟೆ | 22 |
| 4 | ನೆಲಮಂಗಲ | 65 |
| | ಒಟ್ಟು | 178 |

4. ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರ ವಿವರ

| ಪ್ರಾಥಮಿಕ ಸಂಪರ್ಕಿತರು | ದ್ವಿತೀಯ ಸಂಪರ್ಕಿತರು |
|---|---|
| 16189 | 16393 |

5. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ SARI and ILI ಪ್ರಕರಣಗಳಿಗೆ ಸಂಬಂದಿಸಿದಂತೆ ವಿವರ

ದಿನಾಂಕ:26.08.2020ರ ಅಂತ್ಯಕ್ಕೆ ಒಟ್ಟು 16638ILI Cases ಮತ್ತು 487 SARI ಪ್ರಕರಣಗಳು ಮತ್ತು 296 ಕೋವಿಟ್-19 ಪ್ರಕರಣಗಳು ಪತ್ತೆಯಾಗಿದ್ದು, ಸೋಂಕಿತರುಗಳನ್ನು ಪತ್ತೆಹಚ್ಚಲಾದ ಆಸ್ಪತ್ರೆಗಳಿಗೆ ರವಾನಿಸಲಾಗಿರುತ್ತದೆ.

6. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 56 ಆರೋಗ್ಯ ಸಮುದಾಯ ಕೇಂದ್ರಗಳು ಮತ್ತು 5 ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಒಟ್ಟು 61 fever clinics ಗಳನ್ನು ಸ್ಥಾಪಿಸಲಾಗಿದೆ.

7. ಗಂಟಲು ದ್ರವ ಪರೀಕ್ಷಾ ಕೇಂದ್ರಗಳ ವಿವರ:

| ಒಟ್ಟು ಗಂಟಲು ದ್ರವ ಪರೀಕ್ಷಾ ಕೇಂದ್ರಗಳ ಸಂಖ್ಯೆ | ಪರೀಕ್ಷೆಗೊಳ ಪಡಿಸಿದ ಗಂಟಲು ದ್ರವಗಳ ಸಂಖ್ಯೆ | ಗಂಟಲು ದ್ರವ ಪರೀಕ್ಷಾ ವರದಿ ನಿರೀಕ್ಷಣೆಯಲ್ಲಿರುವವರ ಸಂಖ್ಯೆ | ಸರಬರಾಜು ಮಾಡಲಾದ ಸಂಖ್ಯೆRapid Antigen Test(RAT)ಕಿಟ್‌ಗಳ | Rapid Antigen Test(RAT)ಗೆ ಒಳಪಡಿಸಿರುವ ಪ್ರಕರಣಗಳ ವಿವರ-2092 | |
|---|---|---|---|---|---|
| | | | | Number Of Positive Cases | Number Of Negative Cases |
| 16 | 17752 | 1160 | 11400 | 1504 | 9860 |

8. ತಾಲ್ಲೂಕುವಾರು ಗಂಟಲು ಧ್ರವ ಪರೀಕ್ಷಾ ಕೇಂದ್ರಗಳ ವಿವರ:

- ನೆಲಮಂಗಲ – 02
- ದೊಡ್ಡಬಳ್ಳಾಪುರ – 03
- ದೇವನಹಳ್ಳಿ – 05
- ಹೊಸಕೋಟೆ – 06

9. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 83 ಟಿಎನ್‌ಆರ್ 2020, ದಿನಾಂಕ:04.04.2020 ರಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೋವಿಡ್ ಕೆಲಸ-ಕಾರ್ಯಗಳ ನಿರ್ವಹಣೆಗಾಗಿ 18 ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ

## 10. Home Quarantined Persons Details (Taluk wise)

| Sl.No | Home Quarantined Taluk wise | Total No of Person | No. Of persons who finished 14 days Quarantined period | No. of persons presently under observation |
|---|---|---|---|---|
| 1 | Hosakote | 1456 | 788 | 668 |
| 2 | Devanahalli | 1391 | 834 | 557 |
| 3 | Doddaballapura | 1618 | 914 | 704 |
| 4 | Nelamangala | 1678 | 849 | 829 |
| TOTAL | | 6143 | 3385 | 2758 |

| | | DCHC COVID-19 CENTRES | | | | |
|---|---|---|---|---|---|---|
| SL.NO | Facility Name | Beds Sanctioned | Currently number of beds occupied | Number of beds vacant | ICU Beds Sanctioned | Number of Ventilators available |
| 1 | Silicon City HopsitalHoskote | 15 | 0 | 15 | 0 | 0 |
| 2 | Colombia Asia clinic | 9 | 7 | 2 | 2 | 2 |
| 3 | Manasa Hospital Devanahalli | 30 | 5 | 25 | 2 | 1 |
| 4 | Nandi Hospital | 30 | 5 | 25 | 5 | 0 |
| 5 | V P MAGNUS HOSPITA L Nelamangala | 20 | 12 | 8 | 0 | 0 |
| 6 | SIDDHAR THA MEDICAL COLLEGE & HOSPITA L | 150 | 0 | 150 | 0 | 0 |
| 7 | GHHoskote | 10 | 10 | 0 | 0 | 1 |
| 8 | GH Nelamangala | 12 | 8 | 4 | 0 | 0 |
| 9 | RAMAIAH HARSHA HOPSITA L Nelamangala | 32 | 32 | 0 | 0 | 0 |
| 10 | RamaiahLeena Hospital DVH | 28 | 22 | 6 | 0 | 0 |
| 11 | Mission Hospital Hos | 30 | 0 | 0 | 0 | 0 |
| 12 | SHREE RAVI SOMESH EKAR HOSPITA L | 15 | 0 | 15 | 2 | 1 |
| 13 | Manasa Hospital, Doddaballapura | 32 | 3 | 29 | 0 | 0 |
| 14 | MCH, Devanahal li (DCH) | 50 | 48 | 2 | 5 | 8 |
| 16 | GH, Doddaballapura | 30 | 30 | 0 | 0 | 0 |
| 17 | Akash Hospital, Devanahalli | 700 | 521 | 179 | 25 | 20 |
| 18 | MVJ, Medical College & Hospital | 400 | 107 | 293 | 13 | 3 |
| | TOTAL | 1593 | 810 | 753 | 54 | 36 |

| | | COVID CARE CENTRES (CCC) - 29 | | | |
|---|---|---|---|---|---|
| SL. NO | TALUK | NAME OF THE CCC | BEDS SANTIONED | Beds Occupied | Beds vacant |
| 1 | Devanahalli | MDRS Kundana | 100 | 0 | 100 |
| 2 | Devanahalli | AtalBihari Vajpayee Residential school Bommavara | 100 | 0 | 100 |
| 3 | Devanahalli | Post Metric Boys Hostel Vijayapura | 24 | 12 | 12 |
| 4 | Doddaballapura | MDRS, Bacchahalli | 66 | 22 | 44 |
| 5 | Devanahalli | Pre metric Boys hostel Budigere | 25 | 17 | 8 |
| 6 | Nelamangala | Sri Siddhartha Institute of Medical Sciences T Begur | 30 | 0 | 30 |
| 7 | Nelamangala | Yatrik Comforts Nelamangala | 10 | 0 | 10 |
| 8 | Nelamangala | Shrinidhi lodge Nelamangala | 50 | 0 | 50 |
| 9 | Nelamangala | Government boys SW hostel Nelamangala town | 60 | 0 | 60 |
| 10 | Nelamangala | Government SW general boys hostel Narasipura | 60 | 0 | 60 |
| 11 | Nelamangala | Government SW general boys hostel Byranayakanahalli | 25 | 0 | 25 |
| 12 | Devanahalli | Government Boys Hostel Devanahalli(SW | 200 | 0 | 200 |
| 13 | Devanahalli | Post metric BCM Engineering and Medical boys hostel | 50 | 0 | 50 |
| 14 | Doddaballapura | Dr B R Ambedkar Residential School Isthur | 40 | 25 | 15 |
| 15 | Doddaballapura | Premetric SW Boys hostel Hanabe | 20 | 0 | 20 |
| 16 | Doddaballapura | Premetric SW girls hostel Doddaballapura | 25 | 0 | 25 |
| 17 | Doddaballapura | Premetric SW boys hostel Doddaballapura town | 30 | 15 | 15 |
| 18 | Doddaballapura | Annie Besant park Scout camp Doddaballapura | 80 | 0 | 80 |
| 19 | Doddaballapura | Premetric boys hostel sakkaregollahall i | 20 | 0 | 20 |
| 20 | Doddaballapura | BCM post metric boys hostel Madagondanahalli | 25 | 0 | 25 |
| 21 | Doddaballapura | Government post metric boys hostel Bhuvaneswarinagar | 25 | 7 | 18 |
| 22 | Hoskote | MDRS, Jadigenahalli | 80 | 18 | 62 |
| 23 | Hoskote | MDRS Sulibele | 50 | 0 | 50 |

| | | | | | |
|---|---|---|---|---|---|
| 24 | Hoskote | Premetric BCM boys hostel Nandagudi | 15 | 1 | 14 |
| 25 | Hoskote | Premetric General SW boys hostel Thavarekere | 22 | 22 | 0 |
| 26 | Hoskote | Government general SW boys hostel jadigenahalli | 20 | 0 | 20 |
| 27 | Hoskote | Al Ameen Residential School Hoskote | 70 | 30 | 40 |
| 28 | Hoskote | MDRS, Dandupalya | 40 | 0 | 40 |
| 29 | Hoskote | Premetric General SW boys hostel Sulibele | 25 | 0 | 25 |
| | | TOTAL | 1387 | 169 | 1218 |

**12. ಕೋವಿಡ್–19 ನಿರ್ವಹಣೆಗೆ ಸಂಬಂಧಿಸಿದಂತಯೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅಗತ್ಯ ಪರಿಕರಗಳನ್ನು ಒದಗಿಸುವ ಬಗ್ಗೆ.**

- ಕ್ವಾರಂಟೈನ್ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳಿಗೆ ಪಿಪಿಇ ಕಿಟ್, ಎನ್–95 ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್‌ಗಳನ್ನು ಒದಗಿಸಲಾಗಿರುತ್ತದೆ.

- ಮೇಲ್ವಿಚಾರಣಾ ಅಧಿಕಾರಿ/ಸಿಬ್ಬಂದಿಗಳಿಗೆ ಮತ್ತು ಫಿವರ್ ಕ್ಲಿನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಮತ್ತು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಿ.ಎಂ.ಟಿ.ಸಿ ಸಂಸ್ಥೆಯ ಚಾಲಕರು/ನಿರ್ವಾಹಕರುಗಳಿಗೆ ಎನ್–95 ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್‌ಗಳನ್ನು ಒದಗಿಸಲಾಗಿರುತ್ತದೆ.

- ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳಿಗೆ ಗೌನ್, ಸ್ಯಾನಿಟೈಸರ್, ಎನ್–95 ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್‌ಗಳನ್ನು ಒದಗಿಸಲಾಗಿರುತ್ತದೆ.

- ಕೋವಿಡ್–19 ಕೇರ್ ಸೆಂಟರ್ ಹಾಗೂ ಐಸೋಲೇಷನ್ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೋಲೀಸ್ ಸಿಬ್ಬಂದಿಗೆ ಗೌನ್, ಸ್ಯಾನಿಟೈಸರ್, ಎನ್–95 ಮಾಸ್ಕ್ ಮತ್ತು ಹ್ಯಾಂಡ್‌ಗ್ಲೌಸ್‌ಗಳನ್ನು ಒದಗಿಸಲಾಗಿರುತ್ತದೆ.

13. ಕೋವಿಡ್–19 ತುರ್ತು ಪರಿಸ್ಥಿತಿ ನಿರ್ವಹಣೆಗಾಗಿ ಎಸ್.ಡಿ.ಆರ್.ಎಫ್ ಅನುದಾನದಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒಟ್ಟು **13.71 ಕೋಟಿ** ಅನುದಾನ ಬಿಡುಗಡೆಯಾಗಿರುತ್ತದೆ.

14. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೋವಿಡ್-19 ತಡೆಗಟ್ಟುವ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಗಂಟಲು ಮಾದರಿಯನ್ನು ಸಂಗ್ರಹಿಸಲು ಹಾಗೂ ದೃಢಪಟ್ಟ ವ್ಯಕ್ತಿಗಳನ್ನು ಶೀಘ್ರವಾಗಿ ಆಸ್ಪತ್ರೆಗೆ ದಾಖಲಿಸಲು ಮತ್ತು ನಿರ್ಬಂಧಿತ ವಲಯಗಳ ಕಡೆ ಹೆಚ್ಚಿನ ಗಮನಹರಿಸಿ ವ್ಯಕ್ತಿಗಳ ಚಲನ-ವಲನಗಳ ಮೇಲೆ ಮತ್ತು ಗೃಹ ದಿಗ್ಬಂಧನದಲ್ಲಿರುವವರ ಮೇಲೆ ತೀವ್ರ ನಿಗಾವಹಿಸಲು ಸೂಚಿಸಲಾಗಿದೆ.

Hemalatha

ಶ್ರೀಮತಿ ಪಿ.ಹೇಮಲತಾ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
ಹಾಗೂ ಉಸ್ತುವಾರಿ ಕಾರ್ಯದರ್ಶಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ದೂರವಾಣಿ: 080 : 22257064
080 : 22034710

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಕಛೇರಿ
ಜಲ ಸಂಪನ್ಮೂಲ ಇಲಾಖೆ ಹಾಗೂ
ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸಂಖ್ಯೆ:ಅಮುಕಾ/ಆಶಾ/43/2020

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ:307
ವಿಕಾಸಸೌಧ, ಬೆಂಗಳೂರು
ದಿನಾಂಕ: 11/09/2020

---

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ತುಮಕೂರಿನಲ್ಲಿ ದಿನಾಂಕ: 07/09/2020 ರಂದು ನಡೆಸಿದ ಕೋವಿಡ್-19 ನಿಯಂತ್ರಣಕ್ಕೆ ಸಂಬಂಧಿಸಿದ ಟಿಪ್ಪಣಿಯನ್ನು ಇದರೊಂದಿಗೆ ಲಗತ್ತಿಸಿ ಮಾಹಿತಿಗಾಗಿ ಕಳುಹಿಸಲಾಗಿದೆ.

Rashmi AM
11/09/2020
(ರಶ್ಮಿ.ಎ.ಎಂ)
ಅಪರ ಮುಖ್ಯ ಕಾರ್ಯದರ್ಶಿಗಳ
ಆಪ್ತ ಸಹಾಯಕಿ
ಜಲ ಸಂಪನ್ಮೂಲ ಇಲಾಖೆ

ಇವರಿಗೆ:

1. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ) ಬಹುಮಹಡಿ ಕಟ್ಟಡ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**Note on Tumkur District, related to COVID-19 as on 07.09.2020.**

01. **Review status of Surveillance activities in the District - SARI and ILI and their monitoring protocols.**
   a. Total No of SARI Cases : 792
   b. Total No of ILI Cases : 10237
   c. Total No of Positive Covid-19 Cases : 7526

02. **Formation of Committees as per the instructions issued by Revenue (DM)**

As per direction issued by GOK vide Circular NO:ಕಂಇ 83 ಟಿಎನ್ಆರ್ 2020, Dated:04.04.2020 Committees has been constituted and committees are working as per the GOK Circular. (Copy Attached)

03. **Has the Contingency/District level Crisis Management plan been prepared for the District.**

Contingency/District level Crisis Management plan has been prepared. (Plan attached)

04. **Have the formats for review been filled in by the district:** Yes

05. **Status of Supplies-Medicines, Medical Materials.**

The details of Medicines, Medical Materials Available as fallows
   a. PPE's - 15677
   b. N-95 Mask – 4830
   c. Triple Layer Mask – 13150
   d. Sanitizers 500 ml – 7368
   e. Sanitizers 5000 ml – 16
   f. Viral Transport media 1X25 - 00

06. **Has the HR plan been prepared as per the Contingency/District level Crisis Management plan:** Yes.(Plan attached)

07. **Containment plan for affected areas for the District.**
   a. As on 07.09.2020 totally 7526 cases are reported.
   b. 5580 Patients are discharged.
   c. 1750 case are Active & 183 were Deceased.
   a. The areas where the Patients house located from his house surrounding boundary is being fixed entire containment zone is being cordoned to barricades only one entry and one exit point was planned. People movements are restricted in containment area.

RAKESH SINGH, I.A.S.
Additional Chief Secretary to Govt.,

d. Proper arrangements are made to provide daily necessaries those who are in containment zone.
e. Teams were formed, each team having 2 persons (ANM, Asha, Male Health Workers &AW's) Each team daily survey up to 200 households, those who have fever & ILI symptoms. These teams refer to fever clinic for further management.

08. **Availability of Money under SDRF and Health.**

Availability of Money Under SDRF – 11.68 Lakhs
Availability of Money Under Health – 0

09. **Protection of frontline staff**

**a.** Health – PPE and N95 masks has been distributed to Frontline Health workers and direction has been given to Health workers regarding use of PPE Equipment.
**b.** Municipalities – Masks given to municipality workers and instructions given to all workers.
**c.** Police – Instructions has been given to police officials to wear mask.

**10. Migrant Labour and Homeless:**

As per the direction given by the Govt all the migrant labuors sheltered in Govt relief camp were sent to their natives.

11. **Essential commodities - APMC/Cocoon Markets/Groceries/Retail Shops/Agriculture operations.**

All are functioning normal after unlock.

**12. Periodical updating of Data to State/Monitoring tool.**

Nodal Officer has been appointed for updating information to State/Monitoring tool and its being updated regularly.

**13. Establishment of Lab:**

Lab has been established in district Hospital, Tumkur. Process of sample testing is going on. 96 well extraction machines was established in Lab. It Helps in testing 1000 swabs daily.

7/10

RAKESH SINGH, I.A.S.
Additional Chief Secretary to Govt.,
Water Resources Department

**ದಿನಾಂಕ: 14.09.2020 ರಂದು ಬೆಳಿಗ್ಗೆ 9.30 ಗಂಟೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ವಿಡಿಯೋ ಸಂವಾದದ ಮೂಲಕ ನಡೆಸಿದ ಕೋವಿಡ್-19 ಪ್ರಗತಿ ಪರಿಶೀಲನಾ ಸಭೆಯ ನಡುವಳಿಗಳು**

**ಹಾಜರಿದ್ದವರು:**

1. ಜಿಲ್ಲಾಧಿಕಾರಿಗಳು, ಬಳ್ಳಾರಿ.
2. ಮುಖ್ಯ ಕಾರ್ಯನಿರ್ವಾಹಕ ಆಧಿಕಾರಿಗಳು, ಬಳ್ಳಾರಿ.
3. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು,ಬಳ್ಳಾರಿ

******

ಜಿಲ್ಲಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಮತ್ತು ಸಭೆಯಲ್ಲಿ ಭಾಗವಹಿಸಿದ ಆಧಿಕಾರಿಗಳನ್ನು ಸ್ವಾಗತಿಸಿದರು

ನಂತರ ಬಳ್ಳಾರಿ ಜಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಜಿಲ್ಲಾ ಮಟ್ಟದ ಕೋವಿಡ್-19 ನ ಪ್ರಗತಿಯ ಕ್ರಮಗಳ ಕುರಿತು ವಿವರಣೆ ಬಯಸಿದರು.

ಜಿಲ್ಲಾಧಿಕಾರಿಗಳು, ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್ -19 ಗೆ ಸಂಬಂಧಿಸಿದಂತೆ ಕೋವಿಡ್ -19 ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು. ಜಿಂದಾಲ್ ಕಂಪನಿಗೆ ಸಂಬಂಧಿಸಿದಂತೆ 13918 ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸಿದ್ದು, ಅದರಲ್ಲಿ ಒಟ್ಟು 1460 ಸಕಾರಾತ್ಮಕ ಪ್ರಕರಣಗಳು ಪತ್ತೆಯಾಗಿದ್ದು, ಅದರಲ್ಲಿ ಒಬ್ಬರು ಮಾತ್ರ ಮರಣ ಹೊಂದಿದ್ದು, ಪ್ರಸ್ತುತ 69 ಸಕ್ರೀಯ ಪ್ರಕರಣಗಳು ಚಿಕಿತ್ಸೆ ಹಂತದಲ್ಲಿ ಇರುವುದಾಗಿ ಸಭೆಗೆ ವಿವರಿಸಿದರು.

ಜಿಲ್ಲೆಯಲ್ಲಿ ಒಟ್ಟಾರೆ 147696 ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರಲ್ಲಿ RTPCR-61648 ಹಾಗೂ ANTIGEN -86048 ಗಳು ಪರೀಕ್ಷೆ ಮಾಡಲಾಗಿದ್ದು, ಅದರಲ್ಲಿ 26152 ಸಕಾರಾತ್ಮಕ ಪ್ರಕರಣಗಳು ಪತ್ತೆಯಾಗಿದ್ದು, 4492 ಸಕ್ರೀಯ ಪ್ರಕರಣಗಳು ಚಿಕಿತ್ಸೆ ಪಡೆಯುತ್ತಿದ್ದು, ಮತ್ತು ಇದರಲ್ಲಿ 338 ಮರಣ ಹೊಂದಿದ ಪ್ರಕರಣಗಳಾಗಿದ್ದು, ಮುಖ್ಯವಾಗಿ ಅದರಲ್ಲಿ COMORBIDITY ಯಿಂದ 210 ಪ್ರಕರಣಗಳು ಮರಣ ಹೊಂದಿದ್ದು, ಹಾಗೂ 62 ಪ್ರಕರಣಗಳು ಇತರೆ ಕಾರಣಗಳಿಂದ ಮರಣ ಹೊಂದಿರುವುದಾಗಿ ಸಭೆಗೆ ವಿವರಿಸಿದರು. ಮರಣದ ಪ್ರಮಾಣವನ್ನು ಕಡಿಮೆ ಮಾಡಲು ಪ್ರತಿ ತಾಲೂಕಾ ಆಸ್ಪತ್ರೆಗಳಲ್ಲಿ ಆಮ್ಲಜನಕ ಸೌಲಭ್ಯವಿರುವಂತೆ ವ್ಯವಸ್ಥೆ

ಮಾಡಿಕೊಳ್ಳಲಾಗಿದೆ. ಹಾಗೂ ಅಮ್ಲಜನಕ ಕೊರತೆಯಾಗದಂತೆ ನೋಡಿಕೊಳ್ಳಲು ಜಿಲ್ಲೆಯ ಮೂರು ಆಸ್ಪತ್ರೆಗಳಾದ MCH, VIMS, District Hospital ಬಳ್ಳಾರಿ ಇಲ್ಲಿ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಅಮ್ಲಜನಕ ಕೊರತೆಯಾಗದಂತೆ ಮೇಲಸ್ತುವಾರಿ ಮಾಡಲು ಸಮಿತಿಯನ್ನು ನೇಮಕ ಮಾಡಲಾಗಿದ್ದು ಸದರಿಯವರು ಪ್ರತಿ ದಿನ ಅಮ್ಲಜನಕದ ಸ್ಥಿತಿಗತಿಯ ಮಾಹಿತಿ ಒದಗಿಸಿರುವುದಾಗಿ ಸಭೆಗೆ ವಿವರಿಸಿದರು.

ಈ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಮಾತನಾಡಿ ಅಮ್ಲಜನಕ ಕೊರತೆ ಬೀಳದ ಹಾಗೆ ಜಿಲ್ಲೆಯಲ್ಲಿ ಉತ್ತಮ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡಿರುವ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು. ಬೇರೆ ಜಿಲ್ಲೆಗಳಲ್ಲಿ ಈಗಾಗಲೇ ಅಮ್ಲಜನಕ ಕೊರತೆಯಿದ್ದು ಇದರಿಂದ ಮರಣದ ಪ್ರಮಾಣ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿರುವುದರಿಂದ ಇನ್ನೂ ಮುಂದೆ ಯಾವುದೇ DCHC ಆಸ್ಪತ್ರೆಗಳಲ್ಲಿ ಅಮ್ಲಜನಕ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸಲು ಸೂಚಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಪ್ರತಿನಿತ್ಯ ಖಾಸಗಿ ಆಸ್ಪತ್ರೆ , ಔಷಧಿ ಅಂಗಡಿ, ಹಾಗೂ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆ ಭೇಟಿ ನೀಡಿ ILI ಮತ್ತು SARI ಪ್ರಕರಣಗಳು ನೊಂದಣಿಯಾದ ನಂತರ ಕೋವಿಡ್ -19 ಪರೀಕ್ಷೆಗಾಗಿ ಫೀವರ್ ಕ್ಲಿನಿಕ್ ಗೆ ಮಾರ್ಗದರ್ಶನ ಮಾಡುತ್ತಿರುವುದರಿಂದ ಹೆಚ್ಚು ಹೆಚ್ಚು ಪ್ರಕರಣಗಳು ಲಕ್ಷಣ ರಹಿತ ಸಕಾರಾತ್ಮಕ ಪ್ರಕರಣಗಳು ಕಂಡು ಬರುತ್ತಿವೆ. ಇವರನ್ನು HOME-ISOLATION ಆರೈಕೆ ಪಡೆಯಲು ಪ್ರೋತ್ಸಾಹಿಸಲಾಗುವುದು. ಲಕ್ಷಣ ಹೊಂದಿದ ಸಕಾರಾತ್ಮಕ ಪ್ರಕರಣಗಳನ್ನು DCHC & DCH ಗಳಲ್ಲಿ ಆರೈಕೆ ಮತ್ತು ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಈ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಜಿಲ್ಲೆಯಲ್ಲಿ ILI ಹಾಗೂ SARI ಪ್ರಕರಣಗಳಿಗೆ ಈಗಾಗಲೇ ಪತ್ತೆಯಾಗುತ್ತಿದ್ದು, ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡುತ್ತಿರುವುದರಿಂದ ಜಿಲ್ಲೆಯಲ್ಲಿ ಮರಣದ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಇನ್ನೂ ಹೆಚ್ಚು ಹೆಚ್ಚು ILI ಮತ್ತು SARI ಪ್ರಕರಣಗಳನ್ನು ಶೀಘ್ರದಲ್ಲಿ ಗುರ್ತಿಸಿ ಪರೀಕ್ಷೆಗೆ ಒಳಪಡಿಸಿ ಸಕಾರಾತ್ಮಕ ಪ್ರಕರಣಗಳಿಗೆ ಸೂಕ್ತ ಚಿಕಿತ್ಸೆ ಕೊಡುವುದರಿಂದ ಸೋಂಕು ಹರಡುವಿಕೆಯನ್ನು ಕಡಿಮೆ ಮಾಡಬಹುದು. ಆದ್ದರಿಂದ ILI ಮತ್ತು SARI ಪ್ರಕರಣಗಳನ್ನು ಗುರ್ತಿಸಿ ಪರೀಕ್ಷೆಗೆ ಒಳಪಡಿಸಲು ನಿರ್ದೇಶಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್ 19 ಪರೀಕ್ಷೆಗೆ ಸಂಬಂಧಿಸಿದಂತೆ ಈಗಾಗಲೇ ರಾಜ್ಯ ಮಟ್ಟದಿಂದ 3400 ಕೋವಿಡ್-19 ಪರೀಕ್ಷೆಯ ಗುರಿ ನಿಗಧಿಪಡಿಸಲಾಗಿದ್ದು, ಜಿಲ್ಲೆಯಲ್ಲಿ ಪ್ರತಿದಿನ ಸರಾಸರಿ 2400 ರಿಂದ 2600 ರವರೆಗೆ ಪರೀಕ್ಷೆಗೆ ಒಳಪಡಿಸುವುದಾಗಿ ತಿಳಿಸಿದರು.

ಈ ಕುರಿತು ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ರಾಜ್ಯ ಮಟ್ಟದಿಂದ ನಿಗಧಿಪಡಿಸಿರುವ ಗುರಿಗಿಂತ ಜಿಲ್ಲೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ಕೋವಿಡ್ 19 ಪರೀಕ್ಷೆಗೆ ಒಳಪಡಿಸಿದಲ್ಲಿ ಸೊಂಕು ಹರಡುವಿಕೆಯಲ್ಲಿ ತಡೆಯುವಲ್ಲಿ ಸಹಾಯಕವಾಗುವುದೆಂದು ಹೆಚ್ಚು ಹೆಚ್ಚು ಪರೀಕ್ಷೆಗೆ ಒಳಪಡಿಸುವಂತೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳು, ಮಾತನಾಡಿ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟಾರೆ 05 ಮೋಬೈಲ್ ವಾಹನಗಳನ್ನು ಬಳಸಿಕೊಂಡು ಗ್ರಾಮೀಣ ಮಟ್ಟದಲ್ಲಿ 1952 ಜನರನ್ನು ಪರೀಕ್ಷೆಗೆ ಒಳಪಡಿಸಿದ್ದು, ಅದರಲ್ಲಿ 191 ಸಕಾರಾತ್ಮಕ ಪ್ರಕರಣಗಳು ಕಂಡುಬಂದಿದ್ದು, ಅವರನ್ನು ಸೂಕ್ತ ಚಿಕಿತ್ಸೆಗಾಗಿ HOME ISOLATION ಮತ್ತು ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು.

**ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆ (House hold risk and outreach survey) app:** ಜಿಲ್ಲೆಯಲ್ಲಿ ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆಯನ್ನು Health watch app ಮೂಲಕ ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು **677912** ಮನೆಗಳ ಸಮೀಕ್ಷೆಯ ಗುರಿಗೆ ಅನುಗುಣವಾಗಿ ಇದುವರೆಗೆ **636292 (ಶೇ. 93.86)** ಮನೆಗಳ ಸಮೀಕ್ಷೆಯನ್ನು Health watch app ಮೂಲಕ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಮತ್ತು ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆಯಲ್ಲಿ ಗುರುತಿಸಿದ ಅಪಾಯದ ಗುಂಪುಗಳಲ್ಲಿ ಆಶಾ ಕಾರ್ಯಕರ್ತರಿಂದ ಮನೆ-ಮನೆ ಬೇಟಿ ಮಾಡಿ ಆರೋಗ್ಯ ವಿಚಾರಿಸುವುದರ ಮೂಲಕ ಕೋವಿಡ್ ಲಕ್ಷಣವುಳ್ಳ ವ್ಯಕ್ತಿಗಳನ್ನು ಫೀವರ್ ಕ್ಲಿನಿಕ್ ನಲ್ಲಿ ಪರೀಕ್ಷೆಗೆ ಕಳಿಸಿ ಪರೀಕ್ಷಿಸಲಾಗುತ್ತಿದೆ ಎಂದು ತಿಳಿಸಿದರು.

ವೆಬ್ ಅಪ್ಲಿಕೇಷನ್ನಲ್ಲಿ ಇನ್ ಫ್ಲೂಎನ್ಜ್/ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡುವ ಖಾಸಗಿ ಸಂಸ್ಥೆಗಳು ಮತ್ತು ಮೆಡಿಕಲ್ ಶಾಪ್ ಗಳು ಜಿಲ್ಲೆಯಲ್ಲಿ ದಿನಾಂಕ **13/09/2020** ರಂದು **478** ಖಾಸಗಿ

ಆಸ್ಪತ್ರೆಗಳಲ್ಲಿ 259 **(54%)** ಖಾಸಗಿ ಆಸ್ಪತ್ರೆಗಳು ವೆಬ್ ಅಪ್ಲಿಕೇಷನ್ ನಲ್ಲಿ ಇನ್ ಫ್ಲೂಎನ್ಜ್ / ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡಿವೆ.

ಜಿಲ್ಲೆಯಲ್ಲಿ ದಿನಾಂಕ **13/09/2020** ರಂದು **1087** ಖಾಸಗಿ ಮೆಡಿಕಲ್ ಗಳಲ್ಲಿ **1021 (94%)** ಮತ್ತು ಇಲ್ಲಿಯವರೆಗೆ **1087** ಮೆಡಿಕಲ್ ಗಳಲ್ಲಿ **907 (83.44%)** ಖಾಸಗಿ ಸಂಸ್ಥೆಗಳು ವೆಬ್ ಅಪ್ಲಿಕೇಷನ್ ನಲ್ಲಿ ಇನ್ ಫ್ಲೂಎನ್ಜ್ / ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡಿವೆ.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು

ಎಂ.ಎಸ್.ಶ್ರೀಕರ್
ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,